ಶ್ರೀ ಎನ್. ಧರ್ಮಸಿಂಗ್: ಈಗಾಗಲೇ ಬಹಳ ಲೇಟ್ ಆಗಿದೆ. ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರಾದ ತಾವು ಮೊದಲು ಪ್ರಾರಂಭ ಮಾಡಿ ಒಂದೈದು ನಿಮಿಷ. ಒಳ್ಳೆಯ ಶುಭ ಘಳಿಗೆಯಲ್ಲಿ ಆರಂಭ ಮಾಡಿ.

(ಅಡಚಣೆ)

ಅಧ್ಯಕ್ಷರು: ಮೊದಲು ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಲಿ. ಆಮೇಲೆ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ದಯಮಾಡಿ ಎಲ್ಲರೂ ಸಹಕಾರ ಕೊಡಿ.

6.00 P.M.

10. ನಿಯಮ 69ರ ಮೇರೆಗೆ

ವಿಷಯ: ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಮತ್ತು ಸಕಾಲದಲ್ಲಿ ಮಳೆಯಾಗದೇ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಬರ ಮತ್ತು ಪ್ರವಾಹ ಏನು ಬಂದಿದೆ, ಇವತ್ತು ಬಹಳ ಕಿತ್ತಾಟದಿಂದ ಕೊನೆಗೆ ಅಧ್ಯಕ್ಷರು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಈ ವರ್ಷ ಮೊದಲೇ ಮುಂಗಾರು ಮಳೆ ಬರಲಿಲ್ಲ. ರಾಜ್ಯದ ಎಲ್ಲಾ ಕಡೆ ಕೂಡ ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿದೆ. ಈಗ ಹಿಂಗಾರು ಬಿತ್ತನೆ ಪ್ರಾರಂಭವಾಗಿದೆ. ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಕೂಡ ಪ್ರವಾಸ ಮಾಡಿದ್ದಾರೆ. ನಾವೂ ಕೂಡ ಹೋಗಿ ಬಂದಿದ್ದೇವೆ. ಪಕ್ಷದ ಪರವಾಗಿ ಎಲ್ಲಾ ಕಡೆಗೆ ನಾವು ತಂಡವನ್ನು ರಚಿಸಿ ಸಾಮಾನ್ಯ ಜನರ ರೈತರ ಬವಣೆ ಏನಿದೆ, ಪರಿಸ್ಥಿತಿ ಏನಿದೆ ಎಂದು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ತಾವು ಕೂಡ ಹೋಗಿದ್ದೀರಿ, ಗುಲ್ಬರ್ಗ ಕಡೆ ಬಂದಿದ್ದೀರಿ, ಮಣ್ಣೂರಿಗೆ ಕೂಡ ಹೋಗಿದ್ದೀರಿ. ಇದೆಲ್ಲವನ್ನೂ ಕೂಡ ನೋಡಿಕೊಂಡು, ಸರ್ಕಾರ ಯಾವಾಗಲೂ ಕೂಡ ಸಂಕಟದಲ್ಲಿ ಇರುವಂತಹ ಜನರ ನೆರವಿಗೆ ಬರಬೇಕಾಗಿತ್ತು. 1972ರಲ್ಲಿ ಮೊಟ್ಟ ಮೊದಲನೆಯದಾಗಿ ನಾವು ಮಾನ್ಯ ಖರ್ಗೆಯವರು ಮತ್ತು ರಮೇಶ್‌ಕುಮಾರ್‌ರವರು ಶಾಸಕರಾಗಿ ಬಂದಿದ್ದೆವು. ಗುಲ್ಬರ್ಗ ಭಾಗದಲ್ಲಿ ಎಂದೆಂದಿಗೂ ಆಗಲಾರದಂತಹ 50 ವರ್ಷಗಳ ನಂತರ ಬರದ ಛಾಯೆ ಬಂದಿತ್ತು. ಆಗ ದಿವಂಗತ ದೇವರಾಜು ಅರಸುರವರು ಅಂದಿನ ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಎಂ.ವೈ. ಘೋರ್ಪಡೆಯವರು ರಾಜ್ಯದ ಹಣಕಾಸಿನ ಸಚಿವರಾಗಿದ್ದರು. ಎಲ್ಲಾ ತಂಡ ಮಾನ್ಯ ಕೆ.ಹೆಚ್. ಪಾಟೀಲ್‌ರವರಿಂದ ಹಿಡಿದು, ಯಾರು ಪ್ರಮುಖ ಖಾತೆ ಹೊಂದಿದ್ದರು, ಎಲ್ಲರಿಗೂ ಕೂಡ ಒಂದೊಂದು

ತಾಲ್ಲೂಕಿಗೆ ಹೋಗಿ ಬರತಕ್ಕಂಥ ಆದೇಶ ಕೊಟ್ಟಿದ್ದರು. ಮತ್ತೆ ಅಲ್ಲಿ ಎಡರುತೊಡರುಗಳು ಏನಿತ್ತು ಬೋರ್‌ವೆಲ್ ಹಾಕುವುದಾಗಲಿ, ಬೇರೆ ಬೇರೆ ವಿಚಾರಗಳ ಬಗ್ಗೆ ಕೂಡ ಸ್ಥಳದಲ್ಲೇ ಮಾನ್ಯ ಫೋರ್ಪಡೆಯವರು ಆಜ್ಞೆ ಕೊಡುತ್ತಿದ್ದರು. ಅದನ್ನು ಈಗಲೂ ಕೂಡ ಜನರು ನೆನೆಪಿಸುತ್ತಾರೆ. 1972ರ ಪರಿಸ್ಥಿತಿ ಏನು ಗುಲ್ಬರ್ಗಾದಲ್ಲಿ ಬಂತು ಎಂಬ ಬಗ್ಗೆ ಅಲ್ಲಿಗೆ ಯಾವಾಗ ಹೋದರೂ ಕೂಡ ತಮ್ಮ ಪಕ್ಷದ ಶಾಸಕರು ಹಾಗೂ ಅಲ್ಲಿರತಕ್ಕಂಥ ಉಸ್ತುವಾರಿ ಸಚಿವರನ್ನು ಕೇಳಬಹುದು. ಈಗ ಏನಾಗುತ್ತದೆ ಎಂದರೆ ಇಂತಹ ಪರಿಸ್ಥಿತಿ ಉದ್ಭವವಾದ ಮೇಲೆ ಏಕಾಏಕಿ ಎಲ್ಲ ಕೆಲಸವನ್ನೂ ಸರ್ಕಾರದವರೇ ಮಾಡತಕ್ಕಂಥ ನಿರೀಕ್ಷೆಯನ್ನು ನಾವು ಮಾಡುವುದಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ಹಾಗೂ ಕಂದಾಯ ಮಂತ್ರಿಗಳೇನಿದ್ದೀರಿ, ನೀವು ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ here is a government which has come to our rescue ಎಂದು you have to creat that opinion. ಇವತ್ತು ನೀವು ಯಾವಾಗಲೂ ಕೂಡ ಹೇಳಿಕೆ ಮುಖಾಂತರ ಕೇಂದ್ರ ಸರ್ಕಾರದ ಮೇಲೆ ದೂರು ಹಾಕಿದಿರಿ. ಇವತ್ತು ನಮ್ಮ ಗೃಹಮಂತ್ರಿಗಳು ಬಂದಿದ್ದರು. ಅವರು ಏನೇನು ಸರ್ವೆ ಮಾಡಿದರು. ಆಗ ಮಾನ್ಯ ಜಗದೀಶ್ ಶೆಟ್ಟರ್ ರವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದಂತಹ ಮಾನ್ಯ ಖರ್ಗೆಯವರು, ನಾವು, ಮಾನ್ಯ ಯಡಿಯೂರಪ್ಪನವರು, ಕೃಷಿ ಸಚಿವರಾದ ಬಂಡೆಪ್ಪ ಕಾಂಶಪೂರ್‌ರವರು ಎಲ್ಲರೂ ಕೂಡ ಇದ್ದರು. ಅವರು ಎಲ್ಲ ಕಡೆ ನೋಡಿದರು, ಎಲ್ಲಿಯೂ ಬೆಳೆ ಕಾಣುತ್ತಿಲ್ಲ. ಉತ್ತರ ಕರ್ನಾಟಕದ ಭಾಗದಲ್ಲಿ ಎಲ್ಲಾ ಕಡೆ ಬರ ಪ್ರದೇಶವನ್ನು ನೋಡಿದೆವು. ತದನಂತರ ಯಾವುದೋ ಒಂದು ಸಮಾರಂಭದಲ್ಲಿ ಬಳ್ಳಾರಿಗೆ ಹೋಗಿ ಕೊನೆಯಲ್ಲಿ ನಡೆದಂತಹ ಸಭೆಯಲ್ಲಿ ಭಾವವಹಿಸಿದ್ದೀರಿ. ಅಲ್ಲಿ ಭಾಗವಹಿಸಿದ ಮೇಲೆ ನಾವೆಲ್ಲರೂ ಕೂಡ ನಿರೀಕ್ಷಣೆ ಮಾಡಲಿಲ್ಲ. ಸಮಾಲೋಚನೆ ಮಾಡುವಂತಹ ಕಾಲದಲ್ಲಿ ಮಾನ್ಯ ಶಿವರಾಜ್ ಪಾಟೀಲ್‌ರವರು ಎಷ್ಟು ಹಣ ನಿರೀಕ್ಷಣೆ ಮಾಡುತ್ತಿದ್ದೀರಿ ಎಂದು ಜಗದೀಶ್ ಶೆಟ್ಟರ್‌ರವರನ್ನು ಕೇಳಿದೆವು. ನಾವು ಜಗದೀಶ್ ಶೆಟ್ಟರ್ ಮಾತನಾಡಿದ ಮೇಲೆ ಏನೋ 150 ಕೋಟಿ ಕೊಡಬಹುದು ಎಂದು ಮನಸ್ಸಿಗೆ ಇತ್ತು. ಆದರೆ ಇವತ್ತು 250 ಕೋಟಿ ರೂಪಾಯಿ ಮೊತ್ತದಷ್ಟು ಹಣ ಬಿಡುಗಡೆ ಮಾಡಿದ್ದಾರೆ. ಯಾವಾಗಲೂ ಕೂಡ ಕೇಂದ್ರ ಇವತ್ತು ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಉದ್ಭವವಾದ ಮೇಲೆ ಎಲ್ಲಾ ಕಡೆಗೆ ಹೋಗುತ್ತಾರೆ. ಕೇಂದ್ರ ಸರ್ಕಾರ ಕೂಡ ಸಹಾಯ ಮಾಡುತ್ತದೆ. ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಮತ್ತು ವಿಶೇಷವಾಗಿ ಕಂದಾಯ ಮಂತ್ರಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಎಷ್ಟು ಜನರಿಗೆ ಇವತ್ತು ರಾಜ್ಯದ ಎಲ್ಲಾ ಕಡೆಗೆ ಹೋಗಿಬರತಕ್ಕಂಥ ಆದೇಶ ಮಾಡಿದ್ದೀರಿ. ಯಾವ್ಯಾವ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಆ ಭಾಗದಲ್ಲಿ ಇರುವಂತಹವರಿಗೆ ಕೆಲಸ ಮಾಡತಕ್ಕಂಥ ಆದೇಶ ಕೊಟ್ಟಿದ್ದೀರಿ, ಇದು ಇಲ್ಲಿ

ಆಗಿಲ್ಲ. ಕೇವಲ ಒಂದು ಸಲ ಕರ್ನಾಟಕದ ಮುಖ್ಯಮಂತ್ರಿಗಳು ಒಂದು ಕಡೆ ಹೋಗಿ ವಾಸ್ತವ್ಯ ಹೂಡುತ್ತಾರೆ ಅಲ್ಲಿ ಹೋಗಿ ರಾತ್ರಿ ಇರುತ್ತಾರೆ ಎಂದರೆ ಜನರಿಗೆ ವಿಶ್ವಾಸ ಮೂಡುವುದಿಲ್ಲ. ಇವತ್ತು ತೊಂದರೆ ಇರುವಂತಹ ಜನರಿಗೆ, ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇವತ್ತು ಏನು ಅಂಕಿಅಂಶಗಳು ಇವೆ ಅದರ ಬಗ್ಗೆ ಇಲ್ಲಿ ನೋಡತಕ್ಕಂಥ ಅವಶ್ಯಕತೆ ಇಲ್ಲ, ಹೋದಸಲ ಇದೇ ರೀತಿ ಪ್ರವಾಹ ಬಂತು. ಇವತ್ತು ಕೊಯ್ನಾ ಡ್ಯಾಮ್‌ನಲ್ಲಿ ನೀರು ಬಿಟ್ಟರು. ಅದು ಬಿಜಾಪುರಕ್ಕೆ ಬಂತು. ರಾಯಚೂರಿಗೆ ಬಂತು ಮತ್ತು ಗುಲ್ಬರ್ಗ ಜಿಲ್ಲೆ ಹಾಗೂ ಬಾಗಲಕೋಟೆಗೆ ಬಂತು. ನೀರಿನಿಂದ ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ಅನಾಹುತವಾಯಿತು. ಅನಾಹುತವಾದಂತಹ ಸಮಯದಲ್ಲಿ ನಾನು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ನೀರಾವರಿ ಸಚಿವರಾಗಿದ್ದರು. ಆಗ ರೆವಿನ್ಯೂ ಮಂತ್ರಿಗಳಾದಂತಹ ಮಾನ್ಯ ಎಂ.ಪಿ. ಪ್ರಕಾಶ್‌ರವರೂ ಎಲ್ಲರೂ ಸೇರಿಕೊಂಡು ಳಲಮಟ್ಟಿ ಡ್ಯಾಮ್‌ಗೆ ಹೋದೆವು. ಮುಂಜಾನೆ ಒಂಬತ್ತೂವರೆ ಗಂಟೆಗೆ ಪ್ರಧಾನ ಮಂತ್ರಿಗಳನ್ನು ಸಂಪರ್ಕ ಮಾಡಿದೆವು. The situation is very bad in this area. You must come and help the affected people. ಅಂದ ಮೆಲೆ ಅವರು 15ನೇ ಆಗಸ್ಟ್ ನಂತರ ಬರುತ್ತೇನೆ ಎಂದು ಹೇಳಿದರು. ಆಗ ಲೋಕಸಭೆ ನಡೆಯುತ್ತಿತ್ತು. 16ನೇ ಆಗಸ್ಟ್ ಅವರು ಗೋವಾಕ್ಕೆ ಬಂದರು. ಗೋವಾದಿಂದ ಫ್ಲೈಟ್ ಟೇಕ್ ಆಫ್ ಆಗಲಿಲ್ಲ. ಅಲ್ಲೇ ಒಂದು ದಿವಸ ಕಳೆಯಿತು. ಆಗ ಮುಂಚೆ ಮಾನ್ಯ ಶರದ್ ಪವಾರ್ ರವರು ಅಥಣಿಯಿಂದ ಹಿಡಿದು ಎಲ್ಲಾ ಕಡೆಗೆ ಪ್ರವಾಸ ತೆಗೆದುಕೊಂಡು ಕಬ್ಬು ಬೆಳೆಗಾರರದ್ದು ಏನು ಸಮಸ್ಯೆ ಇದೆ, ಎಷ್ಟು ಕಬ್ಬು ಹಾನಿಯಾಗಿದೆ? ಎಷ್ಟು ಹಣವನ್ನು ಕೊಡಬೇಕು ಎಂದು ಮಾಡಿದರು. ಮಾನ್ಯ ಶರದ್ ಪವಾರ್ ರವರೂ ಕೂಡ ಹಾಸನ ಜಿಲ್ಲೆಗೆ ಬಂದಿದ್ದರು, ಅದು ತಮಗೆ ಗೊತ್ತು. ಅವರು ಇಡೀ ರಾಷ್ಟ್ರದಲ್ಲಿ ದೇಶದ ಕೃಷಿ ಸಚಿವರಾಗಿ ರೈತರ ಸಮಸ್ಯೆಗಳನ್ನು ರೈತರ ಬವಣೆಗಳನ್ನು ನೋಡಿ ಯಾವ ರೀತಿಯಾಗಿ ಸಹಾಯ ಮಾಡಬೇಕು ಎನ್ನುವ ರೀತಿಯಲ್ಲಿ ವ್ಯವಸ್ಥಿತವಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಜಾಮ್‌ದಾರ್ ಆಗಿನ ಕಾಲದಲ್ಲಿ ಇನ್‌ಚಾರ್ಜ್ ಆಫೀಸರ್ ಆಗಿದ್ದರು. ನೀವು ಕೇಳಬಹುದು, ಮಾನ್ಯ ಪ್ರಕಾಶ್‌ರವರು, ನಾನು ಮತ್ತು ಮಾನ್ಯ ಖರ್ಗೆಯವರು ಮೂರು ಸಲ ಬಂದು ಭೇಟಿ ಕೊಟ್ಟಿದ್ದೆವು. ಆಗ ಮಾನ್ಯ ಯಡಿಯೂರಪ್ಪನವರು ಅಡ್ವಾನಿ ಮತ್ತು ಅನಂತ ಕುಮಾರ್‌ರವರನ್ನು ಕರೆದುಕೊಂಡು ಬಂದರು. ಮಾನ್ಯ ಯಡಿಯೂರಪ್ಪನವರು ಯಾವಾಗಲೂ ಕೂಡ ಏನಾದರೂ ವಿಷಯ ಇದ್ದರೆ ವಿರೋಧ ಪಕ್ಷದ ನಾಯಕರಾಗಿ ರಚನಾತ್ಮಕವಾಗಿ ಸಮಸ್ಯೆಗಳ ಬಗ್ಗೆ ಹೆಚ್ಚಿನ ಸಹಕಾರ ಸರ್ಕಾರಕ್ಕೆ ಕೊಡತಕ್ಕಂಥ ರೀತಿಯಲ್ಲಿ ಇರಲಿಲ್ಲ. ಅವರು ಬಹಳಷ್ಟು ಕೂಡ ಒಂದು ನ್ಯೂಸ್ ಕ್ರಿಯೇಟ್ ಮಾಡತಕ್ಕಂಥ ರೀತಿಯಲ್ಲಿ ಎಲ್ಲಿದೆ ಹಣ

ಎನ್ನುವ ರೀತಿಯಲ್ಲಿ ಮಾತನಾಡಿದರು. ಆಗ ನಾವು ಮಾನ್ಯ ಶರದ್ ಪವಾರ್ ರವರು ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ದಾಸ್ ಅವರು ಈಗಲೂ ಕೂಡ ಇದ್ದಾರೆ. ರಾಜ್ಯದ ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಎಷ್ಟು ಹಣ ಬೇಕಾಗಿದೆ ಎಂದು ಮಾನ್ಯ ಶರದ್ ಪವಾರ್ ರವರು ಗೋವಾದಲ್ಲಿ ಇರುವಂತಹ ಪ್ರಧಾನ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿದರು. ಈ ರಾಜ್ಯಕ್ಕೆ 357 ಕೋಟಿ ರೂಪಾಯಿಗಳ ಸಹಾಯ ಸಿಕ್ಕಿದೆ. ಎಂದೆಂದಿಗೂ ಸಿಗಲಾರದಂತಹ ಹಣ ಸಿಕ್ಕಿದೆ. ಕೇಂದ್ರದಿಂದ ಪ್ರಪ್ರಥಮವಾಗಿ ನಮಗೆ ಪ್ರಧಾನ ಮಂತ್ರಿಗಳು ಕೊಟ್ಟಿದ್ದಾರೆ. ಇಂತಹ ಪ್ರಸಂಗ ಬಂದಾಗ, ನಮಗೆ ಅನುಭವ ಇದೆ, ಆ ಅನುಭವದ ಆಧಾರದ ಮೇಲೆ ನಾವು ಕೇಂದ್ರಕ್ಕೆ ಹೋದೆವು. ಅವರಿಗೆ ಹಣ ಕೊಡಬೇಕು ಎಂದು ಕೇಳಿಕೊಂಡೆವು. ಆಗ ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿ ಹೊರಬಂದಾಗ ಮಾನ್ಯ ಯಡಿಯೂರಪ್ಪನವರು ಮತ್ತು ಕುಮಾರಸ್ವಾಮಿ ರವರು ಏನೂ ಇಲ್ಲ ಬರೀ ಕೈಯಲ್ಲಿ ವಾಪಸ್ಸು ಬಂದೆವು ಎಂದು ಹೇಳಿದರು. ಅದಕ್ಕೆ ನಾನು ಮಾನ್ಯ ಯಡಿಯೂರಪ್ಪನವರಿಗೆ ಕೇಳಿದೆ, ಇವತ್ತು ಪೂರಕ ಅಂದಾಜಿನಲ್ಲಿ ಕೇಂದ್ರದಿಂದ 357 ಕೋಟಿ ರೂಪಾಯಿ ಬಂದಿದೆ ಎಂದು ಹೇಳಿದಿರಲ್ಲಾ, ಅದನ್ನು ಮೊದಲು ಏಕೆ ಹೇಳಲಿಲ್ಲ ಎಂದು ನಾನು ಕೇಳಿದೆ. ಇವತ್ತು ಬೆಳಗಾಂ ಜಿಲ್ಲೆಯ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕರೆಸಿ ಮಾತನಾಡಿ. 171 ಕೊಟಿ ರೂಪಾಯಿ ಮನೆಗಳ ಅಭಿವೃದ್ಧಿಗಾಗಿ ರಿಹ್ಯಾಬಿಲಿಟೇಷನ್ ಮಾಡುವುದಕ್ಕೆ ಹಣವನ್ನು ವಿತರಣೆ ಮಾಡಿದ್ದೇವೆ. ಗುಲ್ಬರ್ಗ ಜಿಲ್ಲೆಯಲ್ಲಿ 41 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ, ತಮ್ಮ ಶಾಸಕರನ್ನು ಕೇಳಿ. ಇವತ್ತು 2 ಕೋಟಿ ರೂಪಾಯಿ ಬಿಟ್ಟು ಗುಲ್ಬರ್ಗ ಜಿಲ್ಲೆಗೆ ಹೆಚ್ಚಿನ ಹಣ ಇಲ್ಲ. ಬಿಜಾಪುರಕ್ಕೆ ಹಣ ಇಲ್ಲ. ಬಿಜಾಪುರಕ್ಕೆ ಹೋದಸಲ 34 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. 26 ಕೋಟಿ ಬಾಗಲಕೋಟೆಗೆ ಖರ್ಚು ಮಾಡಿದ್ದೇವೆ. ಮೊನ್ನೆ ಗುಲ್ಬರ್ಗದಿಂದ ಕಾರಿನಲ್ಲಿ ಬರುವಾಗ ಹುರ್ತಿಗೆ ಹೋಗಿದ್ದೆ. ಅಲ್ಲಿ ದೊಡ್ಡ ಅಜಿಟೇಷನ್ ಮಾಡುತ್ತಿದ್ದರು. ಇವತ್ತು ಕೆರೆ ನೀರನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಂದರು, ನಾವೆಲ್ಲರೂ ಅವರಿಗೆ representation ಕೊಟ್ಟಿದ್ದೇವೆಂಬ ಮಾತನ್ನು ಹೇಳಿದರು. ಅಥಣಿಗೆ ರಾತ್ರಿ 10 ಗಂಟೆಗೆ ಹೋಗಿದ್ದೆ, ನಿಮ್ಮ ಸರ್ಕಾರದಲ್ಲಿ ಸಾಕಷ್ಟು ಹಣ ಬಂದಿದೆಯೆಂದು ಹೇಳಿದರು. ಅಧ್ಯಕ್ಷರೆ, ಇವತ್ತು ನಾನು I am not politicalising the things. ಇಂತಹ ಪರಿಸ್ಥಿತಿಯಲ್ಲೂ ಇವತ್ತು ನಾನು ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಹೇಳುತ್ತಿದ್ದೇನೆ. ಕಬ್ಬು ಬೆಳೆಗಾರರು ನಿನ್ನೆ ಕೂಡ ನಿಮ್ಮನ್ನು ಅವರು ಭೇಟಿಯಾಗಿರಬಹುದು. ಇವತ್ತು ಎಲ್ಲಾ ಕಡೆಗಳಲ್ಲೂ ಇಂತಹ ಕೆಲಸಗಳು ನಡೆಯುತ್ತಿವೆ. ನಿನ್ನೆ ಪೂರಕ ಅಂದಾಜುಗಳ ಮೇಲೆ ಮಾತನಾಡುವಾಗ ಮಾನ್ಯ ಯಡಿಯೂರಪ್ಪನವರು ಬಹಳ

ಶಹಬಾಸ್‌ಗಿರಿಯನ್ನು ಪಡೆದರು. ನಾವು ಕಾಲೇಜುಗಳನ್ನು ಕೊಟ್ಟಿದ್ದೇವೆ, ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆ, ಎಂದು ಹೇಳಿದರು. ಇದನ್ನು ಎಲ್ಲಿ ಕೊಟ್ಟಿದ್ದೀರಿ? ಇದರಲ್ಲಿ ತಾರತಮ್ಯ ಏಕೆ? ಇಂತಹ ಒಂದು ತಾರತಮ್ಯ ಕರ್ನಾಟಕ ರಾಜ್ಯದ ಯಾವ ಮುಖ್ಯಮಂತ್ರಿಗಳ ಕಾಲದಲ್ಲೂ ಆಗಿಲ್ಲ. ಇವತ್ತು ಒಂದೇ ಕಡೆಗೆ, ಒಂದೇ ಪಕ್ಷದವರಿಗೆ, ಕೊಡುವಂತಹ ರೀತಿಯಲ್ಲಿ ಮಾಡಿದ್ದೀರಿ. ಅದರಲ್ಲಿ ನಮ್ಮ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು, ನಾರಂಜ ಷುಗರ್ ಫ್ಯಾಕ್ಟರಿಯ ಅಧ್ಯಕ್ಷರು ಆಗಿದ್ದಾರೆ. ನಮ್ಮಲ್ಲಿ ಇವತ್ತು ಡಿ.ಸಿ.ಸಿ. ಬ್ಯಾಂಕ್ ಅನ್ನು ಮುಚ್ಚುವ ಪರಿಸ್ಥಿತಿಯಲ್ಲಿ ಇದೆ. ಇವತ್ತು ಉದ್ದೇಶಪೂರ್ವಕವಾಗಿ, ಮಾನ್ಯ ಗುರುಪಾದಪ್ಪನವರು ಕೇಳಿದಂತಹ ಪ್ರಶ್ನೆಗೆ, ಅವರು ಉತ್ತರವನ್ನೂ ಕೂಡ ಕೊಡಲಿಲ್ಲ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಅಧಿವೇಶನ ನಡೆಯುತ್ತಿದೆ. ಇವತ್ತು ಮೆಡಿಕಲ್ ಕಾಲೇಜನ್ನು ಹಾಸನ ಮತ್ತು ಶಿವಮೊಗ್ಗಕ್ಕೆ ಕೊಟ್ಟಿದ್ದಾರೆ. ಶಿವಮೊಗ್ಗಕ್ಕೆ ಕಾಲೇಜನ್ನು ಕೊಟ್ಟವನು ನಾನು. ಆ ಹೋರಾಟ ಸಮಿತಿಯವರ ಪರವಾಗಿ ಮಾನ್ಯ ಯಡಿಯೂರಪ್ಪನವರು ಬಂದು, ಶಿವಮೊಗ್ಗಕ್ಕೆ ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಬಂದರು. ಇವತ್ತು ಬೆಳಗಾಂನಲ್ಲಿ ಮೆಡಿಕಲ್ ಕಾಲೇಜನ್ನು ಮಾಡಲು ಒಂದು ಕಾಸೂ ಕೂಡ ಇಲ್ಲ. ಗಡಿ ಭಾಗದಲ್ಲಿ ಇರುವ ಸಮಸ್ಯೆಗಳನ್ನು ಹೇಳುತ್ತಾರೆ. ಅಥಣಿಯಲ್ಲಿ ಒಂದು ದೊಡ್ಡ rehabilitation camp ಆಗಬೇಕು. ಶ್ರೀಮತಿ ಸೋನಿಯಾ ಗಾಂಧಿಯವರು ಕೊಟ್ಟು ಹೋದರು, she has given an instructions to the Government. ಇವತ್ತು rehabilitationನಲ್ಲಿ ಏನೇನು ಕೆಲಸಗಳು ಆಗಬೇಕೆಂಬುದನ್ನು ಹೇಳಿದ್ದಾರೆ. ನಾನು ಅದಕ್ಕೆ ಹೇಳುವಂಥಾದ್ದು ಇಷ್ಟೇ ಕೆಲಸ. ಇವತ್ತು ಸರ್ಕಾರ ಮಾಡುವಂತಹ ಕೆಲಸಕ್ಕೆ you have to create an atmosphere. ಈ ರಾಜ್ಯದಲ್ಲಿ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ನಾವು ಎಲ್ಲಾ ಕಡೆಗಳಲ್ಲೂ ಸಮೃದ್ಧವಾದ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ, ಇವತ್ತು ಅದು ಆಗುತ್ತಾ ಇಲ್ಲ. ಇವತ್ತು ಅದರ ಬಗ್ಗೆ ಅಂಕಿ ಅಂಶಗಳು ಇವೆ. ಇವತ್ತು Employment Guarantee Scheme ಅನ್ನು 1970ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಗರೀಬಿ ಹಠಾವೊ ಎಂಬ ರೀತಿಯಲ್ಲಿ ಸ್ಲೋಗನ್ ಕೊಟ್ಟರು. ಈ ಗರೀಬಿ ಹಠಾವೋದಿಂದ ಎಷ್ಟು ಜನರು ಗರೀಬಿಯಿಂದ ದೂರವಾದರು, ಎಂಬ ವಿಚಾರ ಇದೆ. ಆದರೆ ದೇಶದಲ್ಲಿರುವಂತಹ ಬಡ ಜನರ ಮನಸ್ಸಿನಲ್ಲಿ here is the Primie Minister, she has given a slogan, ಅಂತ ಇದೆ. ಇವತ್ತು ನಮ್ಮ ಎಲ್ಲಾ ಬಡವರ ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ. ತದನಂತರ ಶ್ರೀಮತಿ ಸೋನಿಯಾ ಗಾಂಧಿಯವರು Employment Guarantee Scheme ಏನು ಇದೆ, ಎಲ್ಲಾ ಕೆಲಸಗಾರರಿಗೆ, ರಾಜ್ಯದಲ್ಲಿರುವಂತಹ ಶ್ರಮಜೀವಿಗಳಿಗೆ, ದೇಶದಲ್ಲಿರುವಂತಹ ಶ್ರಮಜೀವಿಗಳಿಗೆ ಇವತ್ತು ದಿನಕ್ಕೆ 68 ರೂಪಾಯಿಯಂತೆ

ಕೆಲಸ ಕೊಡಬೇಕೆಂದು ಇದೆ. ಮಾನ್ಯ ಮುಖ್ಯಮಂತ್ರಿಯವರೇ, ಇವತ್ತು ಕರ್ನಾಟಕ ರಾಜ್ಯಕ್ಕೆ ಹಣ 132 ಕೋಟಿ ರೂಪಾಯಿಗಳು ಬಂದಿದೆ. ಇವತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಖರ್ಚು ಮಾಡಿದ್ದಾರೆ, ಬೀದರ್ ಜಿಲ್ಲೆಯಲ್ಲಿ, ಗುಲ್ಬರ್ಗಾ ಜಿಲ್ಲೆಯಲ್ಲಿ, ರಾಯಚೂರು ಜಿಲ್ಲೆಯಲ್ಲಿ ಎಲ್ಲೂ ಕೂಡ ಕೆಲಸ ಆಗುತ್ತಿಲ್ಲ. ನಿಮ್ಮ ಜಿಲ್ಲಾಧಿಕಾರಿಗಳೂ ಕೂಡ ಇದರ ಬಗ್ಗೆ ನೋಡುತ್ತಾ ಇಲ್ಲ. ಈ Employment Guarantee Schemeನಲ್ಲಿ 132 ಕೋಟಿ ರೂಪಾಯಿಗಳು ಬಂದರೆ, ಕೇವಲ 35 ಕೋಟಿ ರೂಪಾಯಿಗಳು ಖರ್ಚು ಆಗಿದೆ. ಇವತ್ತು ಜನರು ಗೂಳೆ ಹೋಗುತ್ತಿದ್ದಾರೆ. ನಾನು ಕೊಪ್ಪಳದ ಎಕ್ಸ್‌ಪ್ರೆಸ್ ಹೋಗುತ್ತದೆ, ಕರ್ನಾಟಕ ಎಕ್ಸ್‌ಪ್ರೆಸ್ ಹೋಗುತ್ತದೆ. ಇವತ್ತು ಎಷ್ಟು ಜನರು ಬಾಂಬೆಗೆ, ಬೇರೆ ಕಡೆಗಳಿಗೆ ಹೋಗುತ್ತಿದ್ದಾರೆ. ಇದು ಸರ್ಕಾರದಿಂದ ನಡೆಯುವಂತಹ ಕೆಲಸ, ಇವತ್ತು ಪ್ರವಾಹಪೀಡಿತ ಪ್ರದೇಶಗಳಿಗೆ ಏನೇನು compensation ಕೊಡುತ್ತಿದ್ದೀರಿ. ಇವತ್ತು ಕೂಡ rehabilitation ಆಗುವಂತಹ ರೀತಿಯಲ್ಲಿ ನಾವು ಕೇಂದ್ರ ಸರ್ಕಾರ ಹಣವನ್ನು ಕೊಡುವಂತೆ ಕೇಳಿದ್ದೇವೆ. ಈಗಾಗಲೇ 157 ಕೋಟಿ ರೂಪಾಯಿಗಳು ಕರ್ನಾಟಕ ಸರ್ಕಾರಕ್ಕೆ ಬಂದಿದೆ. ಈ ಹಣ ಖರ್ಚು ಮಾಡುತ್ತಾ ಇಲ್ಲ. ಇದು ಯಾವಾಗ ಆಗುತ್ತದೆಂದರೆ ಇವತ್ತು ಸರ್ಕಾರದ ಬಗ್ಗೆ ಬದ್ಧತೆ ಬೇಕು. You must have that commitment. ಆಫೀಸರ್‌ಗಳನ್ನು Bureancracy ಏನಿದ್ದಾರೆ, ಅವರನ್ನೂ ಕೂಡ ಬದಲಾಯಿಸಿ ಸರಿಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಾ ಇಲ್ಲ. ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಎಂಟು ವರ್ಷಗಳ ಕಾಲ, ಬಡತನ ರೇಖೆಗೆ ಒಳಗಾಗಿರುವಂಥವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವಂಥ ಸಾಮಾನ್ಯ ಜನರಿಗೆ ಒಂದು ಭರವಸೆಯನ್ನು ಮೂಡಿಸುವಂಥ ಕೆಲಸ ಏನು ಆಯಿತು, ಅದಾದ ನಂತರ ಈ ರಾಜ್ಯದಲ್ಲಿ ನಡೆಯುತ್ತಾ ಇಲ್ಲ. ತಾವು ಯುವಕರಾಗಿದ್ದೀರಿ, ನಿಮಗೆ ಇನ್ನೂ ಸಣ್ಣ ವಯಸ್ಸು ಇದೆ. ಆದರೆ ನೀವು ಈಗ you have to go long way. ಈಗ ನೀವು, you must establish your political credibility. ಇಲ್ಲಿ ಹೇಳುವಂಥಾದ್ದು ಅನುಷ್ಠಾನಕ್ಕೆ ಬರುವಂಥಾದ್ದು ಆಗಬೇಕು. ತಾವು ಹೇಳಿಕೆಗಳನ್ನು ಕೊಡುತ್ತೀರಿ, ಭರವಸೆಗಳನ್ನು ಕೊಡುತ್ತೀರಿ, 300 ಕೋಟಿ ರೂ ಹೇಳುತ್ತೀರಿ, 200 ಕೋಟಿ ರೂ.ಗಳೆಂದು ಹೇಳುತ್ತೀರಿ. ಮಾನ್ಯ ಉಪ ಮುಖ್ಯಮಂತ್ರಿಯವರು ಶೇಕಡ 4 ರಂತೆ ಬಡ್ಡಿಯಲ್ಲಿ ಸಾಲವನ್ನು ಕೊಡುವ ಬಗ್ಗೆ ಹೇಳುತ್ತಾರೆ. ಇನ್ನು ಜನತಾದಳ (ಎಸ್)ನ ಮುಖಂಡರು ಮಾಜಿ ಪ್ರಧಾನಮಂತ್ರಿಗಳಾದಂತಹ ಶ್ರೀಮಾನ್ ದೇವೇಗೌಡರು ಶೇಕಡ 4 ರಂತೆ ಬಡ್ಡಿಗೆ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ರಾಜ್ಯದಲ್ಲಿ ಇವೆಲ್ಲಾ ನಡೆಯುತ್ತಿದೆ. ಇವತ್ತು ಇದೆಲ್ಲದರ ಬಗ್ಗೆ ಸರಿಯಾಗಿ ನಿಗಾ ವಹಿಸಬೇಕಾಗುತ್ತದೆ. ಇವತ್ತು ತಾವೆಲ್ಲರೂ ಮದರಸಾದ ಬಗ್ಗೆ ಹೇಳಿದ್ದೀರಿ, ಇವತ್ತು ಮದರಸಾವು

terrorist center ಆಗಿದೆಯೆಂದು ಹೇಳಿದ್ದೀರಿ. ಇವತ್ತು ಮಾನ್ಯ ಶಂಕರಮೂರ್ತಿಯವರು ಟಿಪ್ಪುಸುಲ್ತಾನ್ ಬಗ್ಗೆ ಹೇಳುತ್ತಾರೆ. ಇವೆಲ್ಲಾ ವಿಚಾರಗಳೂ ಕೂಡ ಇವೆ. ಇವತ್ತು ರಾಜ್ಯದಲ್ಲಿರುವಂತಹ ಸಮಸ್ಯೆಗಳನ್ನು ಬಗೆಹರಿಸುವಂತಹ ರೀತಿಯಲ್ಲಿ, ಇವತ್ತು ತತ್ತರಿಸಿದಂತಹ ಜನರು ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಪ್ರವಾಹಪೀಡಿತ ಜನರಿಗೆ ಬೇರೆ ಕಡೆಗಳಿಗೆ ವಲಸೆ ಹೋಗುವಂತಹ ವ್ಯವಸ್ಥೆಯನ್ನು ನೀವು ಮಾಡಿಲ್ಲ. ಅದಕ್ಕೆ it requires serious attention. ನೀವು ಮಾಡಬೇಕಾಗಿದೆ. ಇವತ್ತು ನೀವು ಎಲ್ಲಾ ಕಡೆಗಳಲ್ಲೂ ಕೊಟ್ಟಿದ್ದೇವೆಂದು ಹೇಳುತ್ತೀರಿ, ನಾನು ಮಾನ್ಯ ಕಂದಾಯ ಸಚಿವರನ್ನು ಕೇಳುವುದೇನೆಂದರೆ, ಒಂದೊಂದು ತಾಲ್ಲೂಕಿಗೆ ಎಷ್ಟು ಹಣ ಹೋಗಿದೆ? ಇವತ್ತು ಭೀಮಾ, ಉಜ್ಜನಿ ಡ್ಯಾಮ್‌ನಿಂದ ಹರಿದು ಬರುವ ನೀರಿನಲ್ಲಿ ಇವತ್ತು ಅಫ್ಜಲ್‌ಪುರ ತಾಲ್ಲೂಕು, ಜೇವರ್ಗಿ ತಾಲ್ಲೂಕಿನ affected area ಜೇವರ್ಗಿ ತಾಲ್ಲೂಕಿಗಿಂತ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಹೆಚ್ಚಿಗೆ ಆಗಿದೆ. ಇದಕ್ಕೆ ಎಷ್ಟು ಹಣವನ್ನು ನೇರವಾಗಿ ಕೊಟ್ಟಿದ್ದೀರಿ? ನಿಮ್ಮ ಶಾಸಕರನ್ನು ಕರೆದು ಕೇಳಿ, ನಮ್ಮ ಕಾಲದಲ್ಲಿ ಎಷ್ಟು ಹಣವನ್ನು ನೇರವಾಗಿ ಕೊಟ್ಟಿದ್ದೀರಿ? ನಿಮ್ಮ ಶಾಸಕರನ್ನು ಕರೆದು ಕೇಳಿ, ನಮ್ಮ ಕಾಲದಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದೇವೆಂಬುದನ್ನು ಕೇಳಿ. ಇವತ್ತು ಇಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲೂ ಇದೆ. ಇದಕ್ಕೆ ತಾವು ವ್ಯವಸ್ಥಿತ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗಿದೆ. ಇವತ್ತು ರಾಜ್ಯದಲ್ಲಿ ಜನರು ಬಹಳಷ್ಟು ಬೇಸತ್ತು ಹೋಗಿದ್ದಾರೆ. ನಿಮ್ಮ ಕಾರ್ಯವೈಖರಿ ಏನು ಇದೆ, ನಿಮ್ಮ administrative setup ಏನು ಇದೆ. ಇವತ್ತು ಯಾವ ಕೆಲಸವೂ ಕೂಡ ನಡೆಯುತ್ತಾ ಇಲ್ಲ. ನಾವು ಇದನ್ನು ಹೇಳುತ್ತಾ ಇಲ್ಲ. ನಿಮ್ಮ ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳುತ್ತಾ ಇದ್ದಾರೆ. ನಿಮ್ಮ ಮಾತನ್ನು ಅಧಿಕಾರಿಗಳು ಕೇಳುತ್ತಾ ಇಲ್ಲ, ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಇವೆಲ್ಲಾ ನಡೆಯುತ್ತಿವೆ. ಮಾನ್ಯ ಅಧ್ಯಕ್ಷರೆ, ನನಗೆ ನಾಳೆಯೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಲ್ಲಾ, ನಾನು ಈಗ ಪ್ರಾರಂಭ ಮಾಡಿದ್ದೇನೆ. ನಾಳೆಯೂ ಅವಕಾಶ ಇದೆಯಲ್ಲಾ. ಈಗ ಮಾನ್ಯ ಬಸವರಾಜರೆಡ್ಡಿಯವರು ಮಾತನಾಡುತ್ತಾರೆ.

ಅಧ್ಯಕ್ಷರು: ತಮಗೆ ನಾಳೆಯೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆದರೆ ಈಗ House continue ಆಗಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾವು Office of Profit Bill ಬಗ್ಗೆ ಚರ್ಚೆ ಮಾಡೋಣವೆಂದರೆ ಬೇಡವೆಂದರು. ಈಗ ಅದು ಇಲ್ಲ, ಇದು ಇಲ್ಲವೆಂದರೆ ಎಂಥಾದ್ದು ಏನು? ಇದು ಯಾವ ನ್ಯಾಯ? ನೀವು Office of Profit Bill ಇವತ್ತು ಬೇಡ, ಇನ್ನೊಂದು ದಿವಸ ಮಾಡೋಣವೆಂದು ಹೇಳಿದ್ದೀರಿ. ಈಗ ಬರದ ಬಗ್ಗೆ ಚರ್ಚೆ ಮಾಡೋಣವೆಂದು ಹೇಳಿದ್ದೀರಿ, ಈಗ ಅಧಿವೇಶನವೇ

ಬೇಡವೆಂದು ಹೊರಟರೆ ಹೇಗೆ ಇದು?

ಅಧ್ಯಕ್ಷರು: ಅಧಿವೇಶನ ಎಂದು ಅಲ್ಲ. ಅವರು House adjourn ಮಾಡೋಣವೆಂದು ಹೇಳುತ್ತಿರುವುದು.

ಶ್ರೀ ಕೆ.ಎಸ್. ಈಶ್ವರಪ್ಪ: ಅದು ಏಕೆ?

ಅಧ್ಯಕ್ಷರು: ಮಾನ್ಯ ಧರ್ಮಸಿಂಗ್‌ರವರೆ, ತಾವು ಮಾತನಾಡಿ, ನಿಮಗೆ ಮಾತನಾಡಲು preparation ಬೇಕಾ?

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮೊನ್ನೆ ರಾಷ್ಟ್ರಪತಿಯವರು ಬಂದರು, ಪ್ರಧಾನಮಂತ್ರಿಯವರಿಗೆ ಏಕೆ ಹೇಳಬೇಕು ಅಂತ ಕೇಳಿದರು. ನೀವು ರಾಜ್ಯವನ್ನು ನಡೆಸುತ್ತಿದ್ದೀರಿ. ರಾಜ್ಯವನ್ನು ನಡೆಸುವಂತಹ ಮುಖ್ಯಮಂತ್ರಿಗಳು ಬಹಳ ಸಂಯಮದಿಂದ ವರ್ತಿಸಬೇಕಾಗುತ್ತದೆ. ನೀವು ನಿಮ್ಮ card ಏನು print ಮಾಡುತ್ತೀರಿ. ಇಲ್ಲಿ ವಿರೋಧಪಕ್ಷದವರು ಬೇರೆ ಎಂದು ಏಕೆ ಆಗುತ್ತಿದೆಯೋ, ಗೊತ್ತಿಲ್ಲ. ನಿಮಗೆ ಸೌಜನ್ಯತೆ ಬಹಳ ದೂರವಿದೆ. ಇವತ್ತು ನೀವು ಸರ್ಕಾರವನ್ನು ನಡೆಸುವಂತಹ ಕಾಲದಲ್ಲಿ ಎಲ್ಲಾ ಕಡೆಗೂ ನಿಗಾ ವಹಿಸಬೇಕಾಗುತ್ತದೆ. ಆದರೂ ಕೂಡ ನಾನು ಸಭೆಗೆ ಬಂದಿದ್ದೆ. ಆ ಸಭೆಯಲ್ಲಿ ತಾವು ಇವತ್ತು ಮಾನ್ಯ ದೇವೇಗೌಡರಿಂದ ಆಗಿದ್ದು ಎಂದು ಹೇಳಿದ್ದೀರಿ. ಮಾನ್ಯ ದೇವೇಗೌಡರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದರು, ನೀರಾವರಿ ಸಚಿವರು ಆಗಿದ್ದರು, P.W.D Minister ಆಗಿದ್ದರು. ಅವರ ಕಾಲದಲ್ಲಿ ಏನು ಆಗಿಲ್ಲವೆಂದು ನಾನು ಹೇಳುತ್ತಾ ಇಲ್ಲ. ಆದರೂ ಕೂಡ ಕರ್ನಾಟಕ ರಾಜ್ಯಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಕಾವೇರಿ ಮತ್ತು ಕೃಷ್ಣೆಗೆ ಮಾನ್ಯ ವೀರಪ್ಪ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಎಸ್.ಎಂ. ಕೃಷ್ಣರವರು ನೀರಾವರಿ ಸಚಿವರು ಆಗಿದ್ದರು. ಇವತ್ತು ಕೃಷ್ಣ ಭಾಗ್ಯ ಜಲ ನಿಗಮದ ಮೂಲಕ ಸಾಕಷ್ಟು ಹಣವನ್ನು ತೆಗೆದುಕೊಂಡು ಒಟ್ಟಾರೆ 9,700 ಕೋಟಿ ರೂಪಾಯಿಗಳಲ್ಲಿ 8,400 ಕೋಟಿ ರೂಪಾಯಿಗಳು ಖರ್ಚು ಆಗಿದೆ. 4,600 ಕೋಟಿ ರೂಪಾಯಿಗಳು ಎಸ್.ಎಂ. ಕೃಷ್ಣಾರವರ ಕಾಲದಲ್ಲಿ, ತದನಂತರ ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ಖರ್ಗೆಯವರ ಕಾಲದಲ್ಲಿ ಮತ್ತು ಹೆಚ್.ಕೆ. ಪಾಟೀಲ್‌ರವರ ಕಾಲದಲ್ಲಿ ಕೂಡ ಆಗಿದೆ. ನಮ್ಮ ಕಾಲದಲ್ಲಿ ಇಟ್ಟಿದಂಥ 3024 ಕೋಟಿ ರೂಪಾಯಿಗಳಿಗೆ 900 ಕೋಟಿ ರೂ.ಗಳ ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ. Sri Kharge had taken a decision, ಕೃಷ್ಣಾ ಜಲಾನಯನ ಪ್ರದೇಶದಲ್ಲಿರತಕ್ಕಂಥ ಎಲ್ಲಾ incomplete projectಗಳನ್ನು complete ಮಾಡಬೇಕು ಎಂದು ನಿರ್ಣಯ ತೆಗೆದುಕೊಂಡರು. ಭಾಲ್ಕಿ ಎಂ.ಎಲ್.ಎ.ಯವರು ಈಗ ಇಲ್ಲಿ ಕಾಣುತ್ತಿಲ್ಲ. ಕಾರಂಜಾ project ಅನ್ನು 1972ರಲ್ಲಿ ಬರಗಾಲವಿದ್ದಾಗ we have started. ಅದರ ಯೋಜನಾವೆಚ್ಚ 9 ಕೋಟಿ ರೂ ಇದ್ದದ್ದು, ಈಗ 479 ಕೋಟಿ ರೂಪಾಯಿಗಳಿಗೆ

ಹೋಗಿದೆ. ಆ ಕಾರಂಜಾ ಯೋಜನೆಯನ್ನು ನಮ್ಮ ಕಾಲದಲ್ಲಿ ಮುಗಿಸಿದ್ದು, ಈಗ ಅದರ ಉದ್ಘಾಟನೆಗೆ ತಾವೂ ಹೋಗಿದ್ದೀರಿ. ಮೊನ್ನೆ ಅವರು ಬೆಣ್ಣೆ ತೊರಾ project ಉದ್ಘಾಟನೆಗೆ ಬಂದಿದ್ದರು. ಅದೂ ಕೂಡ ಬರಗಾಲದಲ್ಲಿ ಪ್ರಾರಂಭವಾದಂಥ project. ಅದಕ್ಕೆ 315 ಕೋಟಿ ರೂಪಾಯಿಗಳು ಖರ್ಚಾಗಿದೆ. ಇವತ್ತು ಅದರ ನೀರು ಎಲ್ಲಿರಗೂ ಹೋಗಿ ಮುಟ್ಟುತ್ತಿದೆ. ತಾವು ಅಲ್ಲಿಗೆ ಬಂದಿರಿ, ನಾವೆಲ್ಲ ಮಾಡಿದ್ದೇವೆ ಎಂದು ಹೇಳಿ ಉದ್ಘಾಟನೆ ಮಾಡಿ ಹೋದಿರಿ. ಮನುಷ್ಯನ ಜೀವನದಲ್ಲಿ, ರಾಜಕೀಯ ಜೀವನದಲ್ಲಿ ಇಂಥವುಗಳೆಲ್ಲಾ ನಡೆಯುತ್ತವೆ. ಬೆಂಗಳೂರು ನಗರದಲ್ಲಿ ನಾವು ಪ್ರಾರಂಭ ಮಾಡಿದ ಎಲ್ಲಾ Fly over ಗಳ ಉದ್ಘಾಟನೆಯನ್ನು ತಾವು ಮತ್ತು ಮಾನ್ಯ ಅಶೋಕ್‌ರವರು ಹೋಗಿ ಮಾಡುತ್ತಿದ್ದೀರಿ. ಅದು ನಮ್ಮ ಪಾಲಿಗೆ ಬಂದಿದೆ, ತಾವು ಮಾಡಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. We have got that philosophical type of mind. ನೀವು ಅದನ್ನು ಮಾಡುತ್ತಿದ್ದೀರಿ ಎನ್ನತಕ್ಕಂಥ ಆತಂಕವಿಲ್ಲ. You are the Chief Minister, you have to do it. ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ಈ ಭಾಗಕ್ಕೆ ತಾವು ಬಂದಿದ್ದೀರಿ. ಈ ಭಾಗಕ್ಕೆ ನೀರು ಹರಿಸತಕ್ಕಂಥ ಕೆಲಸ ಆಗಬೇಕು. ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಉತ್ತರ ಕರ್ನಾಟಕ ಭಾಗದ ಬಗ್ಗೆ ಒಂದು ವರದಿಯನ್ನು ಕೊಡಬೇಕು ಎಂದು ನಂಜುಂಡಪ್ಪ ಆಯೋಗವನ್ನು ಎಸ್.ಎಂ. ಕೃಷ್ಣರವರು constitute ಮಾಡಿದರು. S.M. Krishna was the first Chief Minister, ನಂಜುಂಡಪ್ಪನವರ ವರದಿ ಬಂದ ಮೇಲೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ, ಬೀದರ್‌ನಲ್ಲಿ ವೆಟರ್ನರಿ ವಿಶ್ವವಿದ್ಯಾಲಯ, ಹುಬ್ಬಳ್ಳಿ ಧಾರವಾಡದಲ್ಲಿ ಹನಿ ನೀರು ನಿಗಮ ಈ ಮೂರನ್ನೂ ಅನುಷ್ಠಾನಕ್ಕೆ ತರತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಒಟ್ಟಾರೆ, ಅವರು 9,600 ಕೋಟಿ ರೂಪಾಯಿಗಳಲ್ಲಿ ಇವೆಲ್ಲವನ್ನೂ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ತಮ್ಮ report ನಲ್ಲಿ ನಮೂದಿಸಿದ್ದಾರೆ. ಪ್ರಧಾನ ಮಂತ್ರಿಗಳು 11ನೇ ಫೆಬ್ರವರಿ 2005ರಂದು ಬಂದಾಗ we have made a presentation. ಅದರಲ್ಲಿ ಅರ್ಧದಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಕೊಡಬೇಕೆಂದು ಹೇಳಿದ್ದೇವೆ. ಇವತ್ತು ನಾವು ನಂಜುಂಡಪ್ಪನವರ ವರದಿಯ ಬಗ್ಗೆ ಮಾತನಾಡುವಾಗ ಇವುಗಳನ್ನೆಲ್ಲಾ ಹೇಳಿದರೆ ಮಾನ್ಯ ಈಶ್ವರಪ್ಪನವರು ಎದ್ದೆದ್ದು ಹೇಳುತ್ತಾರೆ; ತಮಗೆ ಅಧಿಕಾರ ಬರುತ್ತದೆ, ಮಂತ್ರಿಯಾಗುತ್ತೇನೆ ಎಂದು ಈಶ್ವರಪ್ಪನವರು ಕನಸಿನ್ನಲ್ಲಿಯೂ ಕಂಡಿರಲಿಲ್ಲ. With all that, ಅವರ honesty ಪ್ರಾಮಾಣಿಕತೆಯನ್ನು ಒಪ್ಪುತ್ತೇನೆ. ಇವತ್ತು ನಂಜುಂಡಪ್ಪನವರ ವರದಿಯ ಬಗ್ಗೆ ಮಾತನಾಡಬೇಕಾಗಿದೆ. ತಾವು ಈ 8 ತಿಂಗಳ ಅವಧಿಯಲ್ಲಿ, ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ನಿಟ್ಟಿನಲ್ಲಿ ಈ ಭಾಗಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ? This is very important. ತಾವು ಇದನ್ನೆಲ್ಲಾ ಹೇಳಲು ಹೋದರೆ, ನಂಜುಂಡಪ್ಪನವರ ವರದಿ ಬಗ್ಗೆ ಮಾತನಾಡಿ

ಎಂದರೆ ಇವರು ಬೇರೆ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ನಂಜುಂಡಪ್ಪನವರ ವರದಿ ಅನುಷ್ಠಾನಕ್ಕೆ ಎಷ್ಟು, ಈ ಭಾಗದಲ್ಲಿರತಕ್ಕಂಥ ನೀರಾವರಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಅಮರ್ಜಾ ಕಾಲುವೆಯ 200 ಕೋಟಿ ರೂಪಾಯಿಗಳ ಕಾಮಗಾರಿಗೆ ಶಂಕು ಸ್ಥಾಪನೆಯಾಗಿದೆ. ಅಲ್ಲಿಗೆ ತಾವೂ ಬಂದಿದ್ದೀರಲ್ಲಾ. ಈ ಭಾಗದಲ್ಲಿರುವಂಥ ಈ ಎಲ್ಲಾ ಸಮಸ್ಯೆಗಳ ಬಗ್ಗೆ ತಾವು ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. You are a very luckiest Chief Minister. 1925ರಲ್ಲಿ ಮಹಾತ್ಮ ಗಾಂಧಿಯವರು ಇಲ್ಲಿಗೆ ಬಂದಿದ್ದರು. ಆಗ ಕಾಂಗ್ರೆಸ್ ಪಕ್ಷದ ಮಹಾ ಅಧಿವೇಶನ ಇತ್ತು. ಆಗ ಮೊದಲಿದ್ದಂಥ, ಸ್ವಾತಂತ್ರ ಹೋರಾಟಗಾರರಾದಂಥ ದೇಶಪಾಂಡೆಯವರು, ಈ ದೇಶಪಾಂಡೆಯವರೆಲ್ಲ ಮೊದಲನೇ Home Minister ಆಗಿದ್ದಂಥ ಬಿ.ಎನ್. ದಾತಾರ್‌ರವರು ಇದ್ದರು. ಈ ದಾತಾರ್ ಅಡ್ವೊಕೇಟ್‌ರವರ ತಂದೆಯವರು, ಅವರು ಬಾವಿಯಲ್ಲಿ ಸ್ನಾನ ಮಾಡಿ ಮಹಾ ಅಧಿವೇಶನಕ್ಕೆ ಹೋಗುತ್ತಿದ್ದರು. ಹಾಗಾಗಿಯೇ ನಾವು ಹೇಳಿದ್ದು, ಗಡಿ ಭಾಗದಲ್ಲಿ ನಡೆಯುತ್ತಿರತಕ್ಕಂಥ ಈ ಅಧಿವೇಶನಕ್ಕೆ ಮಹತ್ವ ಬಂದಿದೆ. ಹಾಗಾಗಿ ಕನ್ನಡಕ್ಕೆ ಆದ್ಯತೆ ಕೊಡಬೇಕೆಂದು ಅವರು ಹೇಳಿದ್ದು. ಆಗ ರಾಜಗೋಪಾಲಚಾರಿಯವರು ಕನ್ನಡದಲ್ಲಿ ಮಾತನಾಡಿ ಎನ್ನತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ. ಮಹಾತ್ಮಾ ಗಾಂಧಿಯವರು ಈ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕ ಅಧಿವೇಶನ ಎಂದೂ ಸಹ ಕರೆದಿದ್ದಾರೆ. ಇಂಥ ಮಹತ್ವವಾದ ಸ್ಥಳದಲ್ಲಿ ಇವತ್ತು ಅಧಿವೇಶನ ನಡೆಯುತ್ತಿದೆ. You have to give a message, ಉತ್ತರ ಕರ್ನಾಟಕ ಭಾಗ ಅಂದರೆ, ಬೀದರ್‌ನಿಂದ ಬೆಳಗಾವಿಯವರೆಗೆ ಇರತಕ್ಕಂಥ ಜನರ ಸಮಸ್ಯೆಗಳೇನಿವೆ, ಇಲ್ಲಿ ಹರಿದುಹೋಗುತ್ತಿರುವ ನೀರನ್ನು ತಡೆದು ನಿಲ್ಲಿಸಿ ಅದನ್ನು ಎಲ್ಲಾ ಕಡೆಗೆ, ಎಲ್ಲಾ ರೈತರಿಗೆ ಕೊಡತಕ್ಕಂಥಾದ್ದು, ಈ ಭಾಗಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ High Schoolಗಳನ್ನು ಕೊಡತಕ್ಕಂಥಾದ್ದು ಮಾಡಬೇಕು. ಈಗ ನೀವು High Schoolಗಳನ್ನು ಎಲ್ಲಿಗೆ ಕೊಡುತ್ತಿದ್ದೀರಿ ಎನ್ನುವ ಪಟ್ಟಿಯನ್ನು ನಾನು ಹೇಳಲೇ? ಮಾನ್ಯ ರೇವಣ್ಣನವರು ಹಾಸನ ಜಿಲ್ಲೆಗೆ, ಹೊಳೆನರಸೀಪುರಕ್ಕೆ ಎಷ್ಟು ಕೊಡುತ್ತಾರೋ ಕೊಡಲಿ. ಆದರೆ, ಅದೇ ರೀತಿ ಬೇರೆ ಕಡೆಗೂ ಕೂಡ ಕೊಡಬೇಕಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ: ಒಂದು wrong message ಹೋಗುತ್ತದೆ. ದಯಮಾಡಿ 2 ನಿಮಿಷ yield ಆಗಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರು ನಿಮಗೆ yield ಆಗಿಯೇ ಇವತ್ತು ಅವರಿಗೆ ಈ ಗತಿ ಬಂದಿರುವುದು. ಇನ್ನಾದರೂ ಸ್ಟಡಿ ಆಗಿರಿ ಎಂದು ಅವರಿಗೆ ಹೇಳುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ರಮೇಶ್‌ಕುಮಾರ್‌ರವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ,.....

ಶ್ರೀ ಎನ್. ಧರಂಸಿಂಗ್: ಮಾನ್ಯ ರೇವಣ್ಣನವರೆ, ಮೊನ್ನೆ ರಸ್ತೆಗಳಿಗೆ, ಸೇತುವೆಗಳಿಗೆ ಹಾಸನ ಜಿಲ್ಲೆಗೆ 1,700 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಬೇರೆ ಕಡೆಗೆ ಕೊಟ್ಟ ಪ್ರಸ್ತಾಪವಿಲ್ಲ. ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಸ್ಕೂಲಿನ ವಿಷಯವನ್ನು ತಮಗೆ ಹೇಳುತ್ತೇನೆ. ದಯಮಾಡಿ 2 ನಿಮಿಷ yield ಆಗಿ. ತಮಗೆ wrong information ಕೊಟ್ಟಿದ್ದಾರೆ. ನಮ್ಮ ಕ್ಷೇತ್ರಕ್ಕೆ ಈಗ 5 High Schoolಗಳನ್ನು ಕೊಟ್ಟಿದ್ದರೆ, ಕಳೆದ 5 ವರ್ಷಗಳಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಒಂದೂ High School ಅನ್ನು ಕೊಟ್ಟಿಲ್ಲ. ಯಾವ ಯಾವ High School ಗಳನ್ನು ನಮ್ಮ ಜಿಲ್ಲೆಗೆ ಕೊಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ದಯಮಾಡಿ ತಾವು ತರಿಸಿಕೊಂಡು ಆಮೇಲೆ ಮಾತನಾಡಿ.

ಶ್ರೀ ಎನ್. ಧರಂಸಿಂಗ್: ಅದರ ಮೇಲೂ ಚರ್ಚೆಯಾಗಲಿ. ನಾನು ಹೇಳತಕ್ಕಂಥ ತಾತ್ಪರ್ಯ ಇಷ್ಟೇ, ಹಳೆಯ ಮೈಸೂರು ಭಾಗದಿಂದ ಬಂದಂಥ ಮಾನ್ಯ ಕುಮಾರಸ್ವಾಮಿಯವರು ಇವತ್ತು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಬಹಳಷ್ಟು ಜಯಕಾರವಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಒಳಗೂ ನರಸೀಪುರ, ಹೊರಗೂ ನರಸೀಪುರ.

ಶ್ರೀ ಹೆಚ್.ಡಿ. ರೇವಣ್ಣ: ಏಕೆ ಮಾನ್ಯ ರಮೇಶ್ ಕುಮಾರ್‌ರವರಿಗೆ ನಮ್ಮ ಮೇಲೆ ಹೊಟ್ಟೆ ಉರಿ. ನಾವು ತಿಳಿದ ಮಟ್ಟಿಗೆ ರಮೇಶ್ ಕುಮಾರ್‌ರವರಿಗೆ ನಮ್ಮ ಮೇಲೆ ಅಭಿಮಾನ ಇದೆ, ಮಾನ್ಯ ದೇಶಪಾಂಡೆಯವರಿಗೂ ನಮ್ಮ ಬಗ್ಗೆ ಅಭಿಮಾನ ಇದೆ. ಮಾನ್ಯ ಖರ್ಗೆ ಸಾಹೇಬರಿಗೂ ನಮ್ಮ ಮೇಲೆ ಅಭಿಮಾನ ಇದೆ. ಹೀಗಿರುವಾಗ ಏಕೆ ನೀವು ಹೀಗೆ ಮಾತನಾಡುತ್ತೀರಿ? ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನನಗೆ ನೀವು ತಿರುಪತಿ ticket book ಮಾಡಿದಾಗಿನಿಂದ ಅಭಿಮಾನ ಬಹಳ ಜಾಸ್ತಿಯಾಗಿಬಿಟ್ಟಿದೆ.

ಶ್ರೀ ಆರ್. ಧ್ರುವನಾರಾಯಣ್: ಹಾಸನ ಜಿಲ್ಲೆಗೇ special order ಆಗಿದೆ, ಹೊಳೆನರಸೀಪುರಕ್ಕೆ special order ಆಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಧ್ರುವನಾರಾಯಣ್ ರವರೇ, ಏನು ಎನ್ನುವುದನ್ನು ನಮ್ಮ time ಬಂದಾಗ ಹೇಳುತ್ತೇನೆ, ಕುಳಿತುಕೊಳ್ಳಿ.

ಶ್ರೀ ಎನ್. ಧರಂಸಿಂಗ್: ತಾರತಮ್ಯ ಇರುತ್ತದೆ. ಆದರೆ ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಎಲ್ಲಾ ಕಡೆಗೆ ನಬಾರ್ಡ್‌ನಲ್ಲಿ atleast ಐದೈದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನಮಗೆ ಬಂದಿರತಕ್ಕಂಥ C.R.F., ಬೇರೆ ಹಣ ಇವೆಲ್ಲವನ್ನೂ ಕೊಡುತ್ತಾ ಬಂದಿದ್ದೇವೆ. ಅದರ ಬಗ್ಗೆ ಹೇಳಿದರೆ ಮತ್ತೆ ಇಲ್ಲಿ ಚರ್ಚೆ ನಡೆಯುತ್ತದೆ, ಹಾಗಾಗಿ ನಾನು ಇಲ್ಲಿ ಅದನ್ನು

ಹೇಳಲಿಕ್ಕೆ ಇಚ್ಛೆಪಡುತ್ತಿಲ್ಲ. Central Road Fund ನಲ್ಲಿ ಎಲ್ಲೆಲ್ಲಿ ರಸ್ತೆಗಳು ಆಗಬೇಕಾಗಿದೆ ಎನ್ನುವುದನ್ನು ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, Chief Engineer ರವರು identify ಮಾಡಬೇಕಾಗುತ್ತದೆ. ನಕಾಶೆಯನ್ನು ಕೊಡಬೇಕಾಗುತ್ತದೆ. ಖಂಡೋರೆಯವರು ಈ ದೇಶದ ಆ ಇಲಾಖೆಯ ಮಂತ್ರಿಗಳಾಗಿದ್ದರು. ಆಗ ಅವರು ಹೇಳುತ್ತಿದ್ದರು, ನೀವು ಈ ರೀತಿ ಹಣ ಕೊಡಬಾರದು, ನೀವು ನನಗೆ map ಕೊಟ್ಟು ಎಲ್ಲೆಲ್ಲಿ ಏನೇನಾಗಿದೆ ಎನ್ನುವುದನ್ನು ನನಗೆ ಮನವರಿಕೆ ಮಾಡಿಕೊಟ್ಟರೆ ಹಣ ಕೊಡುತ್ತೇನೆ ಎಂದು ಹೇಳುತ್ತಿದ್ದರು. ಆಗ ನಾನು ಬಹಳಷ್ಟು ಹಣವನ್ನು ತಂದಿದ್ದೇನೆ, ಎಲ್ಲಾ ಕಡೆಗೂ ವಿತರಣೆ ಮಾಡಿದ್ದೇನೆ. ಹಾಗಾಗಿ ನನ್ನ ವಿನಂತಿ ಏನೆಂದರೆ, ಅಧಿಕಾರ ಇರುತ್ತದೆ, ಹೋಗುತ್ತದೆ, ಅಧಿಕಾರ ಹೋದ ಮೇಲೂ ಕೂಡ ರೇವಣ್ಣನವರನ್ನು ಜನರು, ಅವರ ಕಾಲದಲ್ಲಿ ಇಷ್ಟು ಕೊಟ್ಟಿದ್ದಾರೆ ಎಂದು ನೆನೆಸಿಕೊಳ್ಳಬೇಕು, ಹಾಗೆಯೇ ಕುಮಾರಸ್ವಾಮಿಯವರನ್ನೂ ಕೂಡ ನೆನೆಸಿಕೊಳ್ಳಬೇಕು. ಇವತ್ತು ದೇವರಾಜ ಅರಸುರವರು ಇದ್ದಾರೆಯೇ? ಆದರೂ ಅವರನ್ನು ನಾವು ಏಕೆ ನೆನೆಸಿಕೊಳ್ಳುತ್ತೇವೆ? ಗುಂಡೂರಾಯರನ್ನು ಏಕೆ ನೆನಸಿಕೊಳ್ಳುತ್ತೇವೆ? He was the most Secular Chief Minister of the State. ಇವತ್ತು ಯಾರೂ ಕೂಡ ಅವರ ಜಾತಿಯವರ ಬಗ್ಗೆ ಒಂದು ಮಾತನ್ನೂ ಆಡತಕ್ಕಂಥ ರೀತಿಯಲ್ಲಿ ಇಲ್ಲ. ಅವರು ಯಾವುದೇ ಒಂದು decision ತೆಗೆದುಕೊಳ್ಳಬೇಕಾದರೂ ನನ್ನನ್ನಾಗಲೀ, ಖರ್ಗೆಯವರನ್ನಾಗಲೀ ಕೇಳುತ್ತಿದ್ದರು. ಜೆ.ಹೆಚ್. ಪಟೇಲರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು, he was largely accepted ದೇವೇಗೌಡರೂ ಕೂಡ ಈ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಇವೆಲ್ಲವನ್ನೂ ನಾನು ಏಕೆ ಹೇಳುತ್ತಿದ್ದೇನೆಂದರೆ, ಅಧಿಕಾರ ಬರುತ್ತದೆ, ಹೋಗುತ್ತದೆ, ಆದರೆ ಅಧಿಕಾರದ ಅವಧಿಯಲ್ಲಿ ಮಾಡಿದಂಥ ಕೆಲಸಕ್ಕೆ ಜನ ಅವರನ್ನು ನೆನೆಸಿಕೊಳ್ಳುತ್ತಾರೆ. ನಾನು ಒಂದು ಮಾತನ್ನು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಉಪ ಚುನಾವಣೆಗೆ ಕೃಷ್ಣರವರೇ ರಾಜೀನಾಮೆ ಕೊಟ್ಟು ಪ್ರಚಾರಕ್ಕೆ ಬರುತ್ತಿದ್ದಾರೆ. ಹಳೆ ಮೈಸೂರಿನಲ್ಲಿ ಎಸ್.ಎಂ. ಕೃಷ್ಣರವರು ಹೇಳುತ್ತಿದ್ದರು, ನಮ್ಮ ಕಡೆ ಹತ್ತರಲ್ಲಿ 8 ಕೆಲಸ ಮಾಡಿ, 2 ಕೊಡಲಿಲ್ಲ ಅಂದರೆ ಚಡ್ಡಿ ಹಾಕಿಕೊಂಡು ಎದುರು ಬರುತ್ತಾರೆ. ನಿಮ್ಮ ಕಡೆ ಜನ ಬಹಳ ಚೆನ್ನಾಗಿದ್ದಾರೆ. ನೀವು ಮಣ್ಣೂರು ಗ್ರಾಮಕ್ಕೆ ಎಂ.ವೈ. ಪಾಟೀಲರ ಜೊತೆ ಹೋಗಿದ್ದೀರಲ್ಲಾ, ಅವರು 10 ಸಮಸ್ಯೆ ಬಗ್ಗೆ ಕೇಳಿರಬೇಕು, ನೀವು ಅದರಲ್ಲಿ ಒಂದನ್ನಾದರೂ ಪರಿಹರಿಸಿ ಅವರು ಜೀವನ ಪರ್ಯಂತ ನೆನೆಸುತ್ತಾರೆ. ನಾನು ಹೇಳತಕ್ಕಂಥದ್ದು ಉತ್ತರ ಕರ್ನಾಟಕದ ಭಾಗದ ಜನರಿಗೆ ಎಷ್ಟು ನೀವು ಕೆಲಸ ಮಾಡುತ್ತೀರೋ, ಅಷ್ಟು ನಿಮಗೆ ರಾಜಕೀಯವಾಗಿ ಪ್ರೋತ್ಸಾಹ ಸಿಗುತ್ತದೆ. ಡಾ: ನಂಜುಂಡಪ್ಪನವರ ವರದಿಯಲ್ಲಿ ಎಲ್ಲೆಲ್ಲಿ ಶೈಕ್ಷಣಿಕವಾಗಿ,

ಆರ್ಥಿಕವಾಗಿ ಏನೇನು ಕೆಲಸ ಮಾಡಬೇಕೆಂಬ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅದರ ಬಗ್ಗೆ ಇನ್ನೂ ಕೂಡ ತಮ್ಮ ಸಂಪುಟದಲ್ಲಿ ಚರ್ಚೆಯಾಗಿಲ್ಲ ಮತ್ತು ಕ್ರಮ ತೆಗೆದುಕೊಳ್ಳಬೇಕೆಂಬುದಾಗಿಲ್ಲ. ಮಾನ್ಯ ಈಶ್ವರಪ್ಪನವರು ಭರಾಟೆಯಲ್ಲಿ ಹೇಳುತ್ತಾರೆ. ಮಾನ್ಯ ಯಡಿಯೂರಪ್ಪನವರು ಬಂದರೆ, full stop ಇಲ್ಲ, coma ಇಲ್ಲ. ಆರ್ಥಿಕ ವಿಷಯವನ್ನು ಹೇಳಿಯೇ ಹೇಳುತ್ತಾರೆ. ಹಾಗಾದರೆ, ಆಗುವುದಿಲ್ಲ. ಸರಿಯಾದ ರೀತಿಯಲ್ಲಿ ಇವತ್ತಿನ ದಿವಸ ಹೇಳಬೇಕಾಗುತ್ತದೆ. ಜನರಿಗೆ ಭರವಸೆ ಕೊಡಬೇಕಾಗುತ್ತದೆ. ಇವತ್ತು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳೇ, ಇವತ್ತು 128 ಕೋಟಿ ರೂಪಾಯಿ CRF ನಲ್ಲಿದೆ. ಎಷ್ಟು release ಮಾಡಿದ್ದೀರಿ? ಇವತ್ತು resource mobilization ಆಗಿದೆ ಎಂದು ಹೇಳುತ್ತೀರಿ. Resource mobilization ನಲ್ಲಿ ಹೆಚ್ಚಿನ ಹಣವನ್ನು ನಿಮಗೆ ಒದಗಿಸಿದ್ದರೆ ಇವತ್ತು ಬಿಡುಗಡೆ ಮಾಡಬೇಕು. Planning Commission ನಲ್ಲಿ 2004–05ರಲ್ಲಿ, we are first in the country. Resource mobilization ನಲ್ಲಿ planning outlay ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದು ದಾಖಲೆಗಳಲ್ಲಿದೆ. 2005–06ರಲ್ಲಿ Planning Commission has appreciated Rs. 800 crores they have given more. ನಾವು ಎಂ.ವಿ. ರಾಜಶೇಖರನ್ ಜೊತೆ ಹೋಗಿದ್ದೆವು ಅವರು ತಮ್ಮ ಜೊತೆಯಲ್ಲಿ ಬರುತ್ತಾರೆ. ನನಗೆ ಗೊತ್ತಿದೆ. ಆದರೆ, ಅವರು plan outlay ಯಲ್ಲಿ 19.2 increase ಮಾಡಿ ಕೊಟ್ಟಿದ್ದಾರೆ. ಇವತ್ತು ನಾವು ಕೆಲಸ ಮಾಡಿದ್ದೇವೆ. ಸರ್ಕಾರ ಏಕೆ ಹೋಯಿತು? ಹೇಗೆ ಬಂತು? ಆ ಚರ್ಚೆಗೆ ನಾನು ಬರುತ್ತಿಲ್ಲ. ಸರ್ಕಾರ ಹೋಗತಕ್ಕಂಥದ್ದು ಬಹಳ ಒಂದು ಸಂಚು. ಇವತ್ತು ಕೆಲಸ ಮಾಡತಕ್ಕಂಥದ್ದರಲ್ಲಿ ಯಾವಾಗಲೂ ಆಗಲಿಲ್ಲ. ಇವತ್ತು ಯಾವ ವಿಷಯದ ಬಗ್ಗೆ ಸಮ್ಮಿಶ್ರ ಸರ್ಕಾರ ಬಂದಿದೆ, ಸೋನಿಯಾ ಗಾಂಧಿಯವರ ಆದೇಶದ ಮೇರೆಗೆ, ಈ ರಾಷ್ಟ್ರದಲ್ಲಿ secular forces are to be united in this country. ರಾಜ್ಯ ಮಟ್ಟದಲ್ಲಿ ಇರಬೇಕೆಂಬ ಉದ್ದೇಶವಿದೆ. ನೀವು ಯಾರಿಂದ ದೂರಾಗಿ ನಮ್ಮ ಕಡೆಗೆ ಬಂದಿರಿ. ಈಗ ಮತ್ತೆ ನೀವು ಬಿಟ್ಟಿದ್ದೀರಿ. ಜಾಣರಿದ್ದೀರಿ. ಇವತ್ತು ಚಲುವರಾಯಸ್ವಾಮಿ ಇದ್ದಾರಲ್ಲಾ, ನಮ್ಮಲಿಯೂ Health Minister ಆದರು, ಈಗ Transport Minister ಆಗಿದ್ದಾರೆ. ಯಾವಾಗಲೂ ಕೂಡ ನಾವೇನು ತಿಳಿದುಕೊಂಡಿದ್ದೇವು ಅಂದರೆ, ಅವರು ಬಿಜೆಪಿ ಜೊತೆಯಲ್ಲಿ ಸಂಧಾನ ಮಾಡುತ್ತಿದ್ದರು. BJP is basically an emotional party. ಸಿದ್ಧಾಂತದ ಮೇಲೆ ದೀನ್ ದಯಾಳ್ ಉಪಾಧ್ಯಾಯ್, ಶಾಮ್ ಪ್ರಸಾದ್ ಮುಖರ್ಜಿ, ಇವರೆಲ್ಲರೂ ಆದರ್ಶ ಆಗಿರುವ ಜನರಾಗಿದ್ದರು. ಇವತ್ತು ಅಧಿಕಾರಕ್ಕೋಸ್ಕರ ಶಾಮೀಲಾಗಲ್ಲವೆಂದು ನಾವು ತಿಳಿದುಕೊಂಡಿದ್ದೆವು. ಆದರೆ, ಶಾಮೀಲಾಗಿದ್ದಾರೆ. ಶಾಮೀಲಾದ ಮೇಲೆ ನಾವೇನು ಹೇಳುತ್ತೇವೆ, ಇಂಥ ಒಂದು ಅಪವಿತ್ರವಾದಂಥ ideological point of view ನಿಮಗೆ ಅವರಿಗೆ ಏನೂ

ಸಂಬಂಧವಿಲ್ಲ. ಆದರೂ ಒಂದಾಗಿದ್ದೀರಿ. ಆದರೆ, ಇವತ್ತು ಒಂದು ಕೆಲಸ ಮಾಡಿ. ಸುಮ್ಮನೆ ಹೇಳಬೇಡಿ. ಹೇಳಿಕೆ ಕೊಡಬೇಡಿ. ಈಶ್ವರಪ್ಪ ಸ್ವಲ್ಪ ಕೆಲಸ ಮಾಡುತ್ತಾರೆ. ನಮಗೆ ನೀರಾವರಿ ಕೊಟ್ಟಿಲ್ಲ. ಯಾವ transfer ಹೇಳಿಲ್ಲ. ಆದರೆ, ಏಕೆ ಹೇಳುತ್ತಿದ್ದೆನೆಂದರೆ, ಕೆಲಸ ಮಾಡತಕ್ಕಂಥ ರೀತಿ ನೀತಿ ಬೇಕಾಗಿದೆ. ರೇವಣ್ಣನವರೂ ಕೂಡ ಕೆಲಸ ಮಾಡುತ್ತಾರೆ. ಆದರೆ, ಅವರು ಒಂದೇ ಕಡೆ ಲೆಕ್ಕ ಹಾಕುತ್ತಾರೆ. ಪಟ್ಟಿ ನೋಡಿ, ಯಾರು ನಮ್ಮವರು, ಯಾರು ಅಲ್ಲವೆಂದು ನೋಡುತ್ತಾರೆ. ಅದೇ ತಪ್ಪು. ನನ್ನಲ್ಲಿ ಆ ಗುಣ ಇರಲಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಅವರು ಏನೇ ಪಟ್ಟಿ ಮಾಡಿದರೂ ನಿಮ್ಮದೊಂದು ಪಾಲು ತೆಗೆದಿಟ್ಟುಕೊಂಡಿರುತ್ತಾರೆ.

ಶ್ರೀ ಎನ್. ಧರ್ಮಸಿಂಗ್: ಏನಿಲ್ಲ. ಸುಮ್ಮನೆ ಏಕೆ ಹೇಳುತ್ತೀರಿ. ಕೇಳಿ ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಿದ್ದೀರಿ. ತಾವು ಬಹಳಷ್ಟು ಸಭೆ ಸಮಾರಂಭಗಳಿಗೆ ಹೋಗಿದ್ದೀರಿ. ಈ ಭಾಗದ ಜನರು ಮೊಟ್ಟ ಮೊದಲನೆಯದಾಗಿ ಕನ್ನಡದ ಧೀರ, ವೀರ ಮುಖ್ಯಮಂತ್ರಿ ಅನ್ನುತ್ತಾರೆ. ಇವತ್ತಿನ ದಿವಸ ಗಡಿನಾಡಿನಲ್ಲಿ ಅಧಿವೇಶನ ನಡೆಸುತ್ತಿದ್ದೀರಿ. ಗಡಿನಾಡಿನಲ್ಲಿ ಅಧಿವೇಶನ ಮಾಡತಕ್ಕಂಥ ಕಾಲದಲ್ಲಿ ಯಾವಾಗ ನಮ್ಮ Assembly ಪ್ರಾರಂಭವಾಯಿತು, ಆರ್.ಆರ್. ಪಾಟೀಲ್ ಬಂದರು. ಮಹಾರಾಷ್ಟ್ರ ಏಕೀಕರಣ ಸಮಿತಿಯ 30 ಸಾವಿರ ಜನರು ಮಹಾರಾಷ್ಟ್ರ ಝಲಾಚ್ ಪಾಹಿಜೆ ಬೆಳಗಾಂ ಎನ್ನುವ ರೀತಿಯಲ್ಲಿ ಕೂಗಾಡಿದ್ದಾರೆ. ಯಾವಾಗ ಮಹಾರಾಷ್ಟ್ರದ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್‌ರವರು ಮಹಾರಾಷ್ಟ್ರ ಸದನದಲ್ಲಿ, Legislative Council ನಲ್ಲಿ ಮತ್ತು ಶರದ್‌ಪವಾರ್‌ರವರು, ನಮ್ಮ ಶಿವರಾಜ್ ಪಾಟೀಲ್‌ರವರು ಎಲ್ಲರೂ ಕೂಡಿ ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಶಿವಸೇನಾ ಜನರು ಶಿವಾಜಿ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡುತ್ತಿದ್ದಾಗ ಹೋಗಿ ನಮಗೆ ನ್ಯಾಯ ದೊರಕಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಆವಾಗ ನಾನು ಪತ್ರಿಕಾ ಹೇಳಿಕೆ ಕೊಟ್ಟಿದ್ದೇನೆ. ಇದೇನೋ ಅನಾಹುತವಾಗುತ್ತಿದೆ, ಮುಖ್ಯಮಂತ್ರಿಗಳು immediate ಆಗಿ ಸರ್ವಪಕ್ಷದ ಸಭೆ ಕರೆಯಬೇಕೆಂದು ಹೇಳಿದೆ. ಆದರೆ, ಅವರು ಕರೆಯಲಿಲ್ಲ. ಮಹಾಜನ ವರದಿ ಆಗಿಬಿಟ್ಟಿದೆ, ಇನ್ನು ಏತಕ್ಕೆ ಕರೆಯಬೇಕೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಕೊನೆಯದಾಗಿ ಏನು ಹೇಳಿದರು ಎಂದರೆ, ಬೆಳಗಾಂ ಜಿಲ್ಲೆಯ 868 ಹಳ್ಳಿ, ಬೀದರ್ border ನಲ್ಲಿರತಕ್ಕಂಥ ಹಳ್ಳಿಗಳು, ಇವೆಲ್ಲವನ್ನೂ ಕೂಡ ಕೇಂದ್ರಾಡಳಿತಕ್ಕೆ ಸೇರಿಸಬೇಕೆಂದು ಹೇಳಿದಾಗ ಅವರ ಕಣ್ಣು ತೆರೆಯಿತು. ಅದಾದ ಮೇಲೆ ನಮ್ಮನ್ನು ಕರೆದರು, ನಾವು ಹೋಗಿದ್ದೇವೆ. ಇವತ್ತು ಇದರ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಇವತ್ತು ಗಡಿಭಾಗದ ಜನರಿಗೆ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಇವತ್ತು ಮುಖ್ಯಮಂತ್ರಿಗಳೇ ನೀವು

ಕಾರ್ಯರೂಪದಲ್ಲಿ ತೋರಿಸಬೇಕಾಗುತ್ತದೆ. ಕೇವಲ ಹೇಳಿಕೆ ಮುಖಾಂತರ ಅಲ್ಲ. ತಾವು ರಾಜ್ಯದ ಮುಖ್ಯಸ್ಥರಾಗಿದ್ದೀರಿ, ಮುಖ್ಯಮಂತ್ರಿಗಳಾಗಿದ್ದೀರಿ. ಗಡಿ ಭಾಗದಲ್ಲಿರತಕ್ಕಂಥ ಕನ್ನಡ ಜನರ ಭಾವನೆಗಳನ್ನು ಇವತ್ತು ಎತ್ತಿ ಹಿಡಿಯತಕ್ಕಂಥ ರೀತಿಯಲ್ಲಿ, ಅವರ ಗೌರವವನ್ನು ಕಾಪಾಡತಕ್ಕಂಥ ರೀತಿಯಲ್ಲಿ ನೀವು ಕೆಲಸ ಮಾಡಬೇಕಾಗಿದೆ. ಅದಕ್ಕೆ ಇವತ್ತಿನ ದಿವಸ ಅಧಿವೇಶನ ನಡೆದಿದೆ. ಅಧಿವೇಶನ ಕರೆದಾಗ ತಾವು ಊರಿನಲ್ಲೇ ಇರಲಿಲ್ಲ. ಯಾರಿಗೆ ಹೇಳಬೇಕು? ಅವರು ನಮಗೆ ಸೌಜನ್ಯತೆಗೂ phone ಮಾಡಲಿಲ್ಲ. ವಿರೋಧ ಪಕ್ಷದವರೆಂದು ಎಂ.ಪಿ. ಪ್ರಕಾಶ್‌ರವರೂ ಕೂಡ ಮರೆತುಬಿಟ್ಟಿದ್ದಾರೆ. ಅವರು ಹೇಗೆಂದರೆ ಹೇಗೆ ತಾಳ ಇರುತ್ತದೆ ಹಾಗೆ ಬಾಕಿ ಹೋಗುತ್ತಾರೆ. ಸುಮ್ಮನೆ confrontation ತೆಗೆದುಕೊಳ್ಳುವುದಿಲ್ಲ. ನೀವು ಹೇಳಬೇಕಾಗಿತ್ತು. ಇವತ್ತು session ಕರೆಸುತ್ತಿದೇವೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಪ್ರಕಾಶ್ ಸಾಹೇಬರು ಹೇಗೆಂದರೆ, ಪಾನಿ ತೇರಾ ರಂಗ್ ಕೈಸಾ ಅಂದರೆ ಜಿಸ್ ಮೆ ಮಿಲಾ ಹೈ ವೈಸಾ. ನಿಮ್ಮ ಬಣ್ಣ ಹೇಗೆ ಎಂದರೆ, ನೀವು ಯಾವ ಬಣ್ಣ ಹಾಕುತ್ತೀರೋ ಆ ಬಣ್ಣ. ನೀವು ಕೆಂಪು ಬಣ್ಣ ಹಾಕಿರಿ ಕೆಂಪು ಬಣ್ಣ, ಹಸಿರು ಬಣ್ಣ ಹಾಕಿ ಹಸಿರಾಗುತ್ತದೆ. ನೀವು ಯಾವುರು ಹಾಕುತ್ತೀರೋ, ಆ ಬಣ್ಣ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನನಗೆ ಒಂದು ಒಳ್ಳೆಯ ಪ್ರಮಾನ ಪತ್ರ ಕೊಟ್ಟಿದ್ದೀರಿ. ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ನಾನು ಒಂದು ಬಣ್ಣ ಮಾತ್ರ ಸ್ಥಿರ ಇಟ್ಟಿದ್ದೇನೆ. ನಾನು ಎಂದೂ ಕೂಡ ಕಾಂಗ್ರೆಸ್ ಪಕ್ಷಕ್ಕೆ ಹೋಗಿಲ್ಲ. ಬೇರೆ ಪಕ್ಷಕ್ಕೆ ಹೋಗಿಲ್ಲ. ನಾನು ನಿಮ್ಮ ಪಕ್ಷದಲ್ಲೇ ಇದ್ದೇನೆ. ನಮ್ಮಲ್ಲಿಯ ನಡುವೆ ಭಿನ್ನಾಭಿಪ್ರಾಯ ಬಂದಾಗ ಹಿಂದೆ ಜೆ.ಹೆಚ್. ಪಟೇಲರ ಹಿಂದೆ ಹೋಗಿದ್ದೆ. ಈಗಲೂ ಕೂಡ ನಾನು ದೇವೇಗೌಡರ ಜೊತೆ ಹೋಗಿದ್ದೇನೆ ವಿನಃ ಬೇರೆ ಯಾವ ಬಣ್ಣವೂ ಆಗಿಲ್ಲ.

ಶ್ರೀ ಎನ್. ಧರ್ಮಸಿಂಗ್: ಇಲ್ಲ, ತಾವೇನೆಂದರೆ, ಗೋಪಾಲಗೌಡರ ಜೊತೆಯಲ್ಲಿ ನರೇಂದ್ರದೇವ, ಅಶೋಕ ಮೆಹತಾ Praja Socialist Party ಯಿಂದ ಇಲ್ಲಿ ಬಂದಿರಿ. (ಜನತಾದಳ (ಎಸ್)ನಲ್ಲಿ ಬಂದಿರಿ ಜನತಾ ಪಕ್ಷದಲ್ಲಿ ಬಂದಿರಿ. ಜನತಾದಳ (ಎಸ್) ಆಯಿತು. ಇವೆಲ್ಲಾ ಆಗಿದೆ. ಪರವಾಗಿಲ್ಲ. ತಾವು ಎಲ್ಲೇ ಇರಿ, ಸರಿಯಾಗಿರಿ. ನಿಮ್ಮ ಬಗ್ಗೆ ನಮಗೆ ಗೌರವವಿದೆ. ಅದರ ಬಗ್ಗೆ ಹೇಳುತ್ತಿಲ್ಲ. ಆದರೆ, ನಿನ್ನೆ ನಾವು ಅದರ ಬಗ್ಗೆ ಗಲಾಟೆ ಮಾಡಿದರೆ, ಗಡಿನಾಡಿನಲ್ಲಿ ಆಗತಕ್ಕಂಥ ಅಧಿವೇಶನಕ್ಕೆ ಕಾಂಗ್ರೆಸ್ ಪಕ್ಷದವರು ಅಡ್ಡಿ ಆತಂಕ ಮಾಡುತ್ತಾರೆ ಎನ್ನತಕ್ಕಂಥದ್ದು ಆಗುತ್ತದೆ. ಅದಕ್ಕೇ ನಾವೇನೂ ಕೇಳಲಿಲ್ಲ. Business Advisory Committeeಯಲ್ಲಿ ನೀವು ಕರೆಸಬೇಕಾಗಿತ್ತು. ಕರೆಸಿಲ್ಲ. ಇವತ್ತು agendaವೇ ಇಲ್ಲ. ಇವತ್ತು

ಗಡಿಭಾಗದಲ್ಲಿ ಆಗತಕ್ಕಂಥದ್ದು ಎಂದು ಮಾನ್ಯ ಈಶ್ವರಪ್ಪನವರು ಎಲ್ಲರೂ ಹೇಳುತ್ತಿದ್ದೀರಿ. ಇವತ್ತು ನೀವೇಕೆ ಬರಗಾಲದ ಪರಿಸ್ಥಿತಿ ಬಗ್ಗೆ ಪ್ರವಾಹಪೀಡಿತದ ಬಗ್ಗೆ, ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥದ್ದು ಇವೆಲ್ಲಾ ವಿಷಯಗಳ ಬಗ್ಗೆಯೂ ಪ್ರಶ್ನೆ ಇಡಬೇಕಾಗಿತ್ತು, ನಾವು ಚರ್ಚೆ ಮಾಡುತ್ತಿದ್ದೆವು. ಇವತ್ತು ಆಗಿದೆ. ಇವತ್ತು ಹಿಂಗಾರಿ ಬಿತ್ತನೆ ನಡೆಯುತ್ತಿದೆ. ನಾನು ಮಾನ್ಯ ಬಂಡೆಪ್ಪ ಕಾಶೆಂಪುರ್‌ರವರಿಗೆ ಹೇಳಿದೆ. ಇವತ್ತು ಬಿತ್ತನೆ ಬೀಜ ಇಲ್ಲ, subsidy ಕೂಡಬೇಕಾಗಿದೆ. subsidyಗೆ ಹಣ ಬಿಡುಗಡೆ ಮಾಡಬೇಕಾಗಿದೆ, ಉತ್ತರ ಮಳೆ start ಆಗಿದೆ ಎಂದು ಹೇಳಿದೆ. ಉತ್ತರ ಮಳೆಯಲ್ಲಿ ಕೂಡ ಮೊದಲು ಜೋಳ ಬಿತ್ತುತ್ತೇವೆ. ಕಡಲೆ ಬಿತ್ತಬೇಕಾಗಿದೆ. ಇವತ್ತು ನಾವು ಕುಸುಬಿ ಬಿತ್ತುತ್ತೇವೆ. ಇವೆಲ್ಲಾ ಆಗತಕ್ಕಂಥ ರೀತಿಯಲ್ಲಿ ಇವತ್ತಿನ ದಿವಸ ಬೀಜ ವಿತರಣೆಯಾಗಬೇಕು. ಆಗಲೂ ಕೂಡ ನಾನು Houseನಲ್ಲಿ ಹೇಳಿದ್ದೆ. ಬಿಡುಗಡೆ ಮಾಡಿದ್ದೇವೆಂದು ಹೇಳಿ. ಅದಲ್ಲ. ಹೋಗಿ ಮುಟ್ಟಬೇಕು. ನಾನು ಈಗ ಶಂತನು ಕನ್ಸಲ್ ಇದ್ದರು. ನಾನು ಅವರನ್ನು ಕರೆಸಿ ಪ್ರತಿಯೊಂದು ಜಿಲ್ಲೆಗೆ ಭೇಟ್ಟಿ ಕೊಟ್ಟು daily you have to report me ಎಂದು ಹೇಳಿದ್ದೆ. ಇವೆಲ್ಲಾ war footing ನಲ್ಲಿ ಆಗಬೇಕು. ಕರ್ನಾಟಕದಲ್ಲಿ ಒಂದು ಸಾರಿ ಆದೇಶ ಕೊಟ್ಟು ಸುತ್ತೋಲೆ ಕೊಟ್ಟರೆ ಕೇಳತಕ್ಕಂಥ ಜನ ಇಲ್ಲ. Commitment ಇದ್ದವರು ಬಹಳ ಕಡಿಮೆ ಇದ್ದಾರೆ. ಇವತ್ತೇನು ಎಲ್ಲಾ ಕಡೆಗೆ ಫಸಲು ಬರುತ್ತದೆ, ಜೋಳ ಬರಲಿಲ್ಲವೆಂದರೆ, fodder ಆಗುವುದಿಲ್ಲ, ಇವತ್ತು ನಮಗೆ ತೊಗರಿ 30% ಆಗುತ್ತಿದೆ. ಇವತ್ತು ಕಡಲೆ, ಗೋಧಿ, ಬಿತ್ತುತ್ತಿದ್ದಾರೆ, ಇವೆಲ್ಲಾ ಕಡೆಗೆ ನೀವು ಬೀಜಗಳನ್ನು ಕೊಡುವಂಥ ಕೆಲಸ ಮಾಡಿದರೆ ತಮಗೆ ಪುಣ್ಯ ಬರುತ್ತದೆ. ನಾವು ಹೀಗೆ ಹೇಳಿದರೆ ಆಗುವುದಲ್ಲ. ನೀವು note ಮಾಡಿಕೊಳ್ಳಿ. ಅಧಿಕಾರಿಗಳಿಗೆ ಹೇಳಿ, ಇವತ್ತು ನಿಮ್ಮ Principal Secretary ಅಗ್ರಿಕಲ್ಚರ್ ಯಾರೂ ಕಾಣುತ್ತಿಲ್ಲ, ರಾಮಸ್ವಾಮಿಯವರು ಇದ್ದಾರೆ ಅವರು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಪೂಜಾದಲ್ಲಿ ಇರಬಹುದು. ಅದಕ್ಕೆ ನೀವು ಎಲ್ಲಾ ಕಡೆಗೆ direction ಕೊಡಬೇಕು. ಇವತ್ತು rehabilitation ಮಾಡತಕ್ಕಂಥ ರೀತಿಯಲ್ಲಿ, ಹೋದ ಸಾರಿ ನಿಪ್ಪಾಣಿ ಬೇರೆ ಕಡೆಯಲ್ಲೂ ಸತತವಾಗಿ ಈ ರೀತಿ ಮಳೆ ಬರುತ್ತಿದೆ, rehabilitation ಆಗಬೇಕಾಗಿದೆ. ನೀವು ಮಾಡಿದರೆ ಸಾಕು. ಮಾನ್ಯ ಮಂತ್ರಿಗಳು ಮಧ್ಯ ಮಾತನಾಡಿದರೆ ನಮಗೆ ದಿಕ್ಕು ತಪ್ಪುತ್ತದೆ. ಹೋಗಲಿ ಬಿಡಿ ನಾನು ಹೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯರು ಈ ರಬೀ ಬಗ್ಗೆ ಬಹಳ ಒಳ್ಳೆಯ point ಎತ್ತಿದ್ದಾರೆ. ಈಗ ಎಲ್ಲಾ ಕಡೆ ಮಳೆಯಾಗಿ, ಖಾರೀಫ್ loss ಆಗಿ, ಈಗ ರಬೀ ಏನು ಇದೆಯಲ್ಲಾ, ಈಗ ಬಿತ್ತನೆ start ಆಗುತ್ತಿದೆ, ಅದಕ್ಕೆ ನಮ್ಮ ಇಲಾಖೆ ವತಿಯಿಂದ

ಈ ರಬೀಗೋಸ್ಕರ 75% subsidy ಮುಖಾಂತರ 5 ಬೆಳೆಗಳಿಗೆ, ಜವಾರ್, ಗೋಧಿ, ಕಡಲೆ, ಕುಸುಬಿ ಮತ್ತು sun flower, ಈ ಒಂದು ಬೀಜಗಳಿಗೆ ನಾವು ನಾಳೆ ಅಥವಾ ನಾಡಿದ್ದು ಬೆಳಿಗ್ಗೆ ಹಿಡಿದುಕೊಂಡು ಇಡೀ ಎಲ್ಲಾ ಭಾಗಗಳನ್ನು 75% subsidy ಮುಖಾಂತರ ಕೊಡುವಂಥ ವ್ಯವಸ್ಥೆ ಈಗಾಗಲೇ ಇವತ್ತೇ meeting ತೆಗೆದುಕೊಂಡು ಮಾಡಿದ್ದೇವೆಂದು ತಮಗೆ ಹೇಳುವುದಕ್ಕೆ ಭಯಸುತ್ತೇನೆ. ಅದೇ ರೀತಿ ತಮ್ಮ ಭಾಗದಲ್ಲಿ ನಾಳೆ ಅಥವಾ ನಾಡಿದ್ದು ಬೆಳಿಗ್ಗೆ ಎಲ್ಲರೂ ಹಿಡಿದು 75% subsidy ತೆಗೆದುಕೊಳ್ಳಬಹುದು.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಬಂಡೆಪ್ಪನವರು ಬಹಳ ಒಳ್ಳೆಯವರು ಇದ್ದಾರೆ ಹಾಗೂ ಈ ಗಡಿ ಭಾಗದವರು, ಮಾನ್ಯ ಮುಖ್ಯಮಂತ್ರಿಗಳೇ, ಅವರು ಬೀದರ್‌ನವರು, ಒಳ್ಳೆಯ connection ಇದೆ. ಹೋಗಿ ಬಂದು ಒಳ್ಳೆಯ ಕೆಲಸ ಮಾಡುತ್ತಾರೆ. ಆದರೆ ಈಗ ಸಧ್ಯ crises ನಲ್ಲಿ ಸಂಕಟದಲ್ಲಿರತಕ್ಕಂಥ ರೈತರ ಬಗ್ಗೆ ನೆರವು ಕೊಡುವುದರ ಬಗ್ಗೆ, personal ಆಗಿ ಹೋಗಿ ಮಾತನಾಡಿಕೊಂಡು ಕೆಲಸ ಮಾಡಿ.

SRI BANDEPPA KASHAMPUR: Even ಆ ಪ್ರವಾಹದಲ್ಲಿ ಬಂದಂಥ ಏರಿಯಾವನ್ನು ಕವರ್ ಮಾಡಿದ್ದೇವೆ. Specially ಗುಲ್ಬರ್ಗಾ, ಬೆಳಗಾಂ, ಬಿಜಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಏರಿಯಾ ತೆಗೆದುಕೊಂಡು almost all 6 lakhs hectors ಈ ಒಂದು ರಬೀ ಕ್ರಾಪ್‌ನೊಳಗೆ ಕವರ್ ಮಾಡುವಂಥ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆಂದು ತಮಗೆ ಹೇಳಬಯಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ನಾನು ಬಹಳಷ್ಟು ವಿಚಾರಗಳನ್ನು ಈಗ ಹೇಳಿದ್ದೇನೆ. ಇವತ್ತು ಕೇಂದ್ರ ಸರ್ಕಾರಕ್ಕೆ ತಾವು rehabilitations ಗೆ ತಾವು ಕೇಳಬೇಕಾಗಿದೆ. ಜಾಮದಾರ್‌ರವರಿಗೆ ಗೊತ್ತಿದೆ. ಹೋದ ಸಲ ನಾವು ಕೊಟ್ಟ ಹಾಗೆ ಹಣವನ್ನು ಕೂಡ ಕೊಟ್ಟಿದ್ದಾರೆ, Finance Department ನಲ್ಲಿ ಏನಾಗುತ್ತದೆಂದರೆ, ಕೇಂದ್ರ ಸರ್ಕಾರದವರು ಯಾವ ಬಾಬತ್ತಿಗೆ ಹಣ ಖರ್ಚು ಮಾಡಬೇಕೆಂದು ಕೊಟ್ಟಿರುತ್ತಾರೋ ಆ ಬಾಬತ್ತಿಗೆ ಹಣ ಖರ್ಚು ಮಾಡುವುದಿಲ್ಲ. ನಿಮ್ಮಲ್ಲಿ ಸರಿಯಾದ ರೀತಿಯಲ್ಲಿ ನಿರ್ವಹಣೆಯಾಗುವುದಿಲ್ಲ. ಒಂದು ಕೆಲಸಕ್ಕೆ ಬಂದಂಥ ಹಣವನ್ನು ಮತ್ತೊಂದು ಕೆಲಸಕ್ಕೆ ಹಣ ವಿತರಣೆ ಮಾಡುತ್ತೀರಿ. ನನಗೆ ತಿಳಿದ ಮಟ್ಟಿಗೆ rehabilitation ಗೆ 157 ಕೋಟಿ ರೂಪಾಯಿ ಬಂದಿದೆ. ಇವತ್ತು ಎಲ್ಲಾ ಕಡೆಗೆ ಹಣ ವಿತರಣೆ ಮಾಡಿ ಕೆಲಸ ಪ್ರಾರಂಭವಾಗಬೇಕಾಗಿದೆ, ಪದೇ ಪದೇ ಈ ಪ್ರವಾಹದಿಂದ ಬಂದಂಥ ಏನು ಭಯದ ವಾತಾವರಣ ಇದೆ, ಅದರಿಂದ ಪಾರಾಗಬೇಕೆಂದು ಜನರದ್ದು, they have taken a decision ನೀವು ಎಲ್ಲಾದರೂ ಕೂಡ ಮನೆಕಟ್ಟಿಸಿ ಕೊಡಿ ನಾವು ಅಲ್ಲಿಗೆ ಹೋಗುತ್ತೇವೆನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ನಮಗೂ ಅನುಭವ ಇದೆ. ನಾವು ಕೂಡ ಹೋಗಿ ಬಂದಿದ್ದೇವೆ

ತಾವು ಒಂದು ಜಿಲ್ಲೆಯಲ್ಲಿ ಮೊಕ್ಕಾಂ ಹೂಡಬೇಕು, ಜಿಲ್ಲಾಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡಬೇಕು, ಯಾವ್ಯಾವ ತಾಲ್ಲೂಕು ಮಟ್ಟದಲ್ಲಿ ಏನೇನು ಸಮಸ್ಯೆ ಇದೆ ಎಂದು ಅಲ್ಲಿನ ತಹಸೀಲ್ದಾರರವರಿಗೆ, ಬಿಡಿಓ ರವರೆಗೆ ನಿರ್ದಿಷ್ಟವಾದಂಥ ಆದೇಶ ಕೊಡಿಸಬೇಕು, ಮತ್ತೆ ಎರಡು ತಿಂಗಳೊಳಗಾಗಿ ಜಿಲ್ಲಾಧಿಕಾರಿಗಳಿಗೆ ಹೇಳಬೇಕು, ನೀವು ಎಲ್ಲಾ ಕಡೆಗೆ report ಕೊಟ್ಟು ನಮಗೆ report ಕೊಡಬೇಕೆಂದು ನೀವು ಅವರಿಗೆ ಹೇಳಬೇಕು. This is the method of doing the things. ಇವತ್ತು ನಮ್ಮದು ಬಹಳ ಸಮಸ್ಯೆಗಳ ಮಧ್ಯದಲ್ಲಿ ಸರಿಯಾಗಿ ಸ್ಪಂದಿಸುತ್ತಿಲ್ಲ, ನಾನು ನೋಡಿದ್ದೇನೆ. ಏಕೆಂದರೆ 36 ವರ್ಷಗಳ ಕಾಲದಲ್ಲಿ ಎಷ್ಟೋ ಸಮಸ್ಯೆಗಳನ್ನು ನನ್ನ ತಾಲ್ಲೂಕಿನಲ್ಲಿ ನನಗೆ ಬಗೆಹರಿಸಲಿಕ್ಕೆ ಆಗಿಲ್ಲ. ಏಕೆ ಆಗಲಿಲ್ಲವೆಂದರೆ, ಅಲ್ಲಿ ಅಧಿಕಾರಿಗಳಿಗೆ ಕೆಲಸ ಮಾಡತಕ್ಕಂಥ ಮನೋಭಾವ ಇಲ್ಲ. ಅದಕ್ಕೆ ಇವತ್ತು ನೀವು ಮಾಡಬೇಕಾಗಿದೆ. ಬೇರೆ ಬೇರೆ ಕಡೆಗಳಲ್ಲಿ ನಿಮ್ಮ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ನಿಮ್ಮ ಮಂತ್ರಿಗಳಿಗೆ ಹತೋಟಿ ಇರುವುದಿಲ್ಲ, ಏಕೆ ಟಿಪ್ಪು ಸುಲ್ತಾನ್ ಬಗ್ಗೆ ಹೇಳುವುದು, ಮತ್ತೆ ಅದರ ಬಗ್ಗೆ ಕ್ಷಮಾಪಣೆ ಕೇಳುವುದು, ನೀವೂ ಕೂಡ ಮದರಸಾ ಬಗ್ಗೆ ಹೇಳತಕ್ಕಂಥದ್ದು, ಇನ್ನೂ ಕೂಡ ಬಿಜೆಪಿ ಮತ್ತು ನಿಮ್ಮ ಜನತಾದಳ (ಎಸ್) ಪಕ್ಷದ ಸಮನ್ವಯ ಸಮಿತಿಯಲ್ಲಿ, ಇನ್ನೂ ಕೂಡ, you have not taken a decision. ಶೋಭಾಯಾತ್ರೆ ಆಗಬೇಕು, ಬಿಡಬೇಕು ಎಂಬುದರ ಬಗ್ಗೆ ಹೇಳಿಲ್ಲ. ನೀವು ಇವತ್ತು ಬದ್ಧರಾಗಿದ್ದೀರಿ. ಇವತ್ತು ಮಾನ್ಯ ದೇವೇಗೌಡರವರೂ ಕೂಡ ಒಂದು ಮಾತು ಹೇಳಿದ್ದಾರೆ. ಶೋಭಾಯಾತ್ರೆಗೆ ನೀವು ಪರವಾನಿಗೆ ಕೊಟ್ಟರೆ ನಾವು ಅದಕ್ಕೆ ಸಹಿಸುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಎಲ್ಲಾ ಕಡೆಗೆ ಇವತ್ತು ಜಾಗ್ರತೆಯಿಂದ ಕೆಲಸ ಆಗಬೇಕಾಗಿದೆ, ಬೇರೆ ಏನೂ ಇಲ್ಲ, ಅದು ಆಗಿಬಿಟ್ಟಿದೆ ಎಂದು ಹೇಳುತ್ತಿರಿ, ಕೊನೆಯ ಗಳಿಗೆಯಲ್ಲಿ ಪುನಃ ಎಡವಿಬಿಡುತ್ತೀರಿ. ಇವತ್ತು ಈ ಎಲ್ಲಾ ಸಮಸ್ಯೆಗಳು ಈ ರಾಜ್ಯದಲ್ಲಿ ಇವೆ. ಬರಪರಿಸ್ಥಿತಿ ಇದೆ, ಪ್ರವಾ ಪೀಡಿತ ಇದೆ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ವಿಶೇಷವಾಗಿ ಈ ಬೆಳಗಾವಿಯಲ್ಲಿ ನಡೆಯತಕ್ಕಂಥ ಏನು ಒಂದು ಅಧಿವೇಶನ ನಡೆಯುತ್ತದೆ, ಅದರ ಮೂಲಕ ಉತ್ತರ ಕರ್ನಾಟಕದ ಜನರ ಮನೋಬಲ ಆತ್ಮವಿಶ್ವಾಸ ಬೆಳೆಸತಕ್ಕಂಥ ರೀತಿಯಲ್ಲಿ ಈ ಅಧಿವೇಶನದ ಮೂಲಕ ನಮ್ಮ ಈ ಭಾಗದ ಜನರ ಪ್ರಗತಿಗೆ ಇಲ್ಲಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳಿಗೆ ಹೆಚ್ಚಿನ ಒತ್ತನ್ನು ಸರ್ಕಾರ ಕೊಟ್ಟಿದೆ. ಈ ಸದನದಲ್ಲಿ ಚರ್ಚೆಯಾಗಿದೆ. ಚರ್ಚೆ ಮುಖಾಂತರ ಇವತ್ತು ಮುಖ್ಯಮಂತ್ರಿಗಳು ನಮಗೆ ಹೇಳಿದ್ದಾರೆ ಎನ್ನತಕ್ಕಂಥ ಅಭಿಪ್ರಾಯ ಮೂಡಬೇಕು. ಜನಾಭಿಪ್ರಾಯ ಮೂಡಿಸತಕ್ಕಂಥ ರೀತಿಯಲ್ಲಿ, you have to take a very tough decision. ನೀವು tough ತೆಗೆದುಕೊಳ್ಳದೆ ಹೋದರೆ, ನಿತ್ಯ ಏನೆಂದರೆ ನೀವು ಸಿ.ಡಿ.ಗಳ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಸಿ.ಡಿ.ಯ ಬಗ್ಗೆ ಉತ್ತರ

ಕೊಡಬೇಕಾಗುತ್ತದೆ. ಅದರಲ್ಲಿ ಮುಳುಗಿಬಿಡುತ್ತೀರಿ, ಜನ ಮಾತನಾಡುತ್ತಾರೆ, ನಾನು ಇದ್ದಿದ್ದನ್ನು ಹೇಳುತ್ತೇನೆ. ಕೆಲವು ಮಂದಿ ಹೇಳಲಿಕ್ಕೆ ಇಲ್ಲ, ಏನ್ರೀ ಅವರೇನು ಮಾಡುತ್ತಾರೆ, ಅವರು ತಮ್ಮ ಸಿ.ಡಿ.ಯಲ್ಲಿ ನಿರತರಾಗಿದ್ದಾರೆ, ಇನ್ನು ಏನೇನು ಬಹಿರಂಗ ಮಾಡುತ್ತಾರೆಂದು ಜನ ಮಾತನಾಡುತ್ತಾರೆ. ಜನ ಮಾತನಾಡತಕ್ಕಂಥದ್ದು ಜನರ ಮಧ್ಯೆದಲ್ಲಿ ಇರುವುದಿಲ್ಲ. ನೀವು ಬೆಂಗಳೂರಿನಲ್ಲಿ ಇರುತ್ತೀರಿ, ಇವತ್ತು ನಾವು ಎಲ್ಲಾ ಕಡೆಗೆ ಪ್ರವಾಸ ಕಾರ್ಯಕ್ರಮವನ್ನು ತೆಗೆದುಕೊಂಡಾಗ ಜನ ಎಲ್ಲಾ ಬಂದು ನಮ್ಮಲ್ಲಿ ಹೇಳಿ ಹೋಗುತ್ತಾರೆ, ಅದಕ್ಕೆ ಇವತ್ತಿನ ದಿವಸ ಮತ್ತೆ politicalise ಆಗುತ್ತಿದೆ, ರಾಜಕೀಯ ಬೆಳೆಸುವುದಕ್ಕೆ ನಾನು ಬಯಸುವುದಿಲ್ಲ, ಮೊನ್ನೆ ಸೆಪ್ಟೆಂಬರ್‌ಗೆ ಬೃಹತ್ತರವಾದ ಸಮಾವೇಶ ಮಾಡಿದಿರಿ, ರಾಜಕೀಯ ಸಮಾವೇಶ, ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಹೋಗಿ ನಾವು ಪ್ರತಿಭಟನೆ ಮಾಡಿದ್ದೇವೆ. ಜನರ ಅಭಿಪ್ರಾಯವನ್ನು ಸಂಗ್ರಹಿಸತಕ್ಕಂಥ ರೀತಿಯಲ್ಲಿ; ನೀವು ಲೆಕ್ಕ ಹಾಕುವುದಿಲ್ಲ ನಾವು ಎಷ್ಟೋ ಅಧಿವೇಶನಗಳನ್ನು ನೋಡಿದ್ದೇವೆ. ಆದರೆ ಅಂತಹ ಬೃಹತ್ತರವಾದ ಸಮಾವೇಶ ನೋಡಿಲ್ಲ. ಅದು ಏನು ತೋರಿಸುತ್ತದೆಂದರೆ, ನಿಮ್ಮ ಸರ್ಕಾರದ ಬಗ್ಗೆ ಜನಾಭಿಪ್ರಾಯವನ್ನು ಎತ್ತಿ ತೋರಿಸುತ್ತದೆ, ನೀವು ಅದಕ್ಕೆ ಲಘುವಾಗಿ ಹೇಳುತ್ತೀರಿ, ಏಕೆ ಲಘುವಾಗಿ ಹೇಳುತ್ತೀರಿ? ನೀವು ಅಂತರಂಗದಲ್ಲಿ ಮಾತನಾಡಿರಿ, ಹೇಳಿರಿ, ಅದಕ್ಕೆ ಇವತ್ತು ಏನಾಗಿದೆ, ಬರ ಇರಬಹುದು, ಜನರು ಬಂದಿಲ್ಲ, ಸಾಕಷ್ಟು ಸಮಸ್ಯೆಗಳ ಒತ್ತಡದಲ್ಲಿ ಜನ ಬರುತ್ತಾರೆ, ರಾಜಕೀಯ ಪಕ್ಷಗಳಿಗೆ ಹೆಚ್ಚಿನ ಸಹಕಾರ ಕೊಡಬೇಕೆಂದು ಬರುತ್ತಾರೆ, ಬೆಂಬಲ ಕೊಡುತ್ತಾರೆ, ಇವೆಲ್ಲವನ್ನೂ ಕೂಡ ನೀವು ನೋಡಿಕೊಂಡು ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ, ನಮ್ಮ ಕಡೆಯವರು ಮಾತನಾಡುವವರು ಇದ್ದಾರೆ. ಇವತ್ತು ಬರಗಾಲದ ಬಗ್ಗೆ ಮತ್ತು ಬೇರೆ ಕಡೆಗೆ, ನಿರ್ದಿಷ್ಟವಾದಂಥ, ಮಾನ್ಯ ಕಂದಾಯ ಮಂತ್ರಿಗಳು ಸರ್ಕಾರದಿಂದೇನು ಕ್ರಮ ತೆಗೆದುಕೊಂಡಿದ್ದೀರಿ, ಅವೆಲ್ಲವನ್ನೂ ಕೂಡ ಹೇಳಬೇಕು. ಮೊನ್ನೆ 22ನೇ ತಾರೀಖು, ಇಲ್ಲಿ ಅಧಿವೇಶನ ಪ್ರಾರಂಭವಾಗುತ್ತದೆ ಎಂದು ಅಲ್ಲಿ ಹಣ ಬಿಡುಗಡೆ ಮಾಡಿ ಬಂದಿದ್ದೀರಿ. ಆ ಬಿಡುಗಡೆ ಮಾಡಿದ ಹಣ ಯಾವಾಗ ಹೋಗುತ್ತದೆ, ಟ್ರಜರಿನಲ್ಲಿ ನೀವು ಟೋಟೆಲ್ ಬಿಲ್ ಕೊಡಬೇಕು ಅಲ್ಲವೆ? ಅಧ್ಯಕ್ಷರೇ, ತಮಗೆ ಗೊತ್ತಿದೆಯೇ ಇಲ್ಲವೋ ತಾವು ಎಂದಾದರೂ ಟೋಕನ್ ತೆಗೆದುಕೊಳ್ಳುವುದಕ್ಕೆ ಹೋಗಿದ್ದೀರೋ? ಬಹಳ ಕಷ್ಟದ ಕೆಲಸ ಇದೆ. ಅದಕ್ಕೆ, ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಜನರಿಗೆ ಮುಟ್ಟಬೇಕು, ಜನರಿಗೆ ತಲುಪಬೇಕು, ಆಗ ನಿಮ್ಮ ಶಾಸಕರಿಗೆ ಅಲ್ಲಿ ನಿಮಗೆ ಬೆಂಬಲ ಕೊಡುತ್ತಾರೆ. ತಾವು ಎಲ್ಲಾ ಕೆಲಸವನ್ನು ಮಾಡಬೇಕೆಂದು ಕೇಳಿಕೊಂಡು, ಇದರ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ಮತ್ತು ಅನೇಕ ಸಾರಿ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುವಂಥ ಸಂದರ್ಭದಲ್ಲಿ

ಹೇಳಿದ್ದೇವೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಂಭೀರವಾಗಿ ಪರಿಶೀಲಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಕೇವಲ ಹೇಳಿಕೆ ಮುಖಾಂತರವಲ್ಲ. ಸರಿಯಾದ ರೀತಿಯಲ್ಲಿ ಹೇಳಿಕೆ ಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿ ನಿರೀಕ್ಷಣೆಯೊಂದಿಗೆ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇದಕ್ಕೊಂದು time fix ಮಾಡುವುದು ಒಳ್ಳೆಯದು. ಪಕ್ಷಗಳವಾರು time fix ಮಾಡಿದರೆ ಒಳ್ಳೆಯದಾಗುತ್ತದೆ, ಈ ಭಾಗದಲ್ಲಿರುವವರು ಬಹಳಷ್ಟು ಜನ ಮಾತನಾಡುವವರು ಇದ್ದಾರೆ.

ಅಧ್ಯಕ್ಷರು: ಆಯಿತು ಇಷ್ಟು ಗಂಟೆಯೆಂದು ಟೈಮ್ ಫಿಕ್ಸ್ ಆ ರೀತಿ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ: ಆ ರೀತಿ ಮಾಡಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಈಗ ನಾಳೆ ಮಾಡೋಣವೆಂದು ಕೆಲವು ಸದಸ್ಯರು ಹೇಳುತ್ತಾರೆ, ಆದರೆ ಪ್ರೆಸ್‌ನವರೂ ಸಹ ನಾವು report ಮಾಡುವುದು ಕಷ್ಟವೆಂದು ಹೇಳುತ್ತಾರೆ, ನಾಳೆ ಮೂರು ಗಂಟೆಗೆ ಮಾಡೋಣವೆ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಈಶ್ವರಪ್ಪನವರೆ, ಇನ್ನೂ ಎರಡು ಗಂಟೆ ಅಲ್ಲದಿದ್ದರೂ ಬೆಳಗಿನ ಜಾವದವರೆವಿಗೂ ಕುಳಿತುಕೊಳ್ಳೋಣ, ತಾವು ಇಷ್ಟೆ ಅರ್ಥ ಮಾಡಿಕೊಳ್ಳಬೇಕು. ರಾತ್ರಿ ನಾವು ಎದ್ದು ಹೋದಾಗ 11–20 ಆಗಿತ್ತು. ನಾವು ಹೋಗಿ ಊಟ ಗೀಟ ಮಾಡಿ ಎಲ್ಲಾ ಮಲಗುವಷ್ಟರಲ್ಲಿ 1–30 ಆಗಿತ್ತು. ಬೆಳಗಿನ ಜಾವ Legislature Party Meeting. ಒಂದೆರಡು telephone call ಊರಿಗೆ ಮಾಡಿ 9–30ಕ್ಕೆ ಎಲ್ಲಾ Legislature Party Meeting ಮುಗಿಸಿಕೊಂಡು ಇಲ್ಲಿಗೆ ಬಂದಿದ್ದೇವೆ. ತಮಗೆ ಪರವಾಗಿಲ್ಲ, ಏಕೆಂದರೆ,ಏನೂ activities ಇಲ್ಲ, ಸ್ವಲ್ಪ we love life. ಆರಾಮವಾಗಿರಬೇಕೆಂದು ಇಷ್ಟಪಡುತ್ತೇವೆ. ನಮ್ಮನ್ನು ಅಷ್ಟು ತೀರಾ ಶಿಕ್ಷೆಗೆ ಒಳಪಡಿಸಿದರೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ನೀವು ಸ್ವಲ್ಪ ಸೋಶಿಯಲೈಜ್ ಆಗಿ. ತಾವು ಫ್ರೀ ಮಾಡಿಕೊಂಡು ಇವೆಲ್ಲವನ್ನೂ ಬಿಸಾಕಿ ಟಿ ಶರ್ಟ್ ಹಾಕಿಕೊಂಡು ಬೆಳಗಾಂ ನಗರದಲ್ಲಿ ಓಡಾಟ ಮಾಡಿಕೊಂಡು ಆಮೇಲೆ ಬನ್ನಿ ಇಲ್ಲಿಯೇನೂ ಆಗುವುದಿಲ್ಲ. ಆಕಾಶ ಏನೂ ಉರಳಿ ಬೀಳುವುದಿಲ್ಲ. ದಯಮಾಡಿ ನಾಳೆಗೆ ಮುಂದೂಡಿ.

ಅಧ್ಯಕ್ಷರು: ನಾಳೆ ಹಾಕಿಕೊಳ್ಳೋಣವೇ? ನಾಳೆ ಬೆಳಿಗ್ಗೆ 11 ಗಂಟೆಗೆ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಅವರ ಭಾಷಣವನ್ನು ದಯಪಾಲಿಸಿದ್ದಾರೆ. ಮಧ್ಯಾಹ್ನ 3.00 ಗಂಟೆಗೆ ಮತ್ತೆ ನಾವು ಸೇರೋಣ.

ಶ್ರೀ ಎನ್. ಧರ್ಮಸಿಂಗ್: ರಾಜ್ಯಪಾಲರ ಭಾಷಣ ಮುಗಿದ ಮೇಲೆ ಮಧ್ಯಾಹ್ನ ಊಟ ಆದ ಮೇಲೆ ಮತ್ತೆ ಸೇರೋಣ.

ಶ್ರೀ ಬಸವರಾಜ್ ರಾಯರೆಡ್ಡಿ: ರಾಜ್ಯಪಾಲರು ಭಾಷಣ ಮಾಡಿದ ಮೇಲೆ ಮತ್ತೆ ನಾವು ಸೇರಬಹುದು. ಮತ್ತೆ ರಾಜ್ಯಪಾಲರ ಭಾಷಣದ ಮೇಲೆ ಯಾವುದೇ ಚರ್ಚೆ ಬೇರೆ ಇರುವುದಿಲ್ಲ.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 9.00 ಗಂಟೆಗೆ ಸೇರೋಣ.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನನ್ನ ಸಲಹೆ ಏನೆಂದರೆ, ಮಾನ್ಯ ರಾಜ್ಯಪಾಲರ ಭಾಷಣ 11.00 ಗಂಟೆಗೆ ಪ್ರಾರಂಭವಾದರೆ 12.00 ಗಂಟೆಯೊಳಗೆ ಮುಗಿದು ಹೋಗುತ್ತದೆ. ಆನಂತರ ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕಿ ಮತ್ತೆ 12.30 ಗಂಟೆಗೆ ಮತ್ತೆ ಪ್ರಾರಂಭ ಮಾಡಬಹುದು.

ಅಧ್ಯಕ್ಷರು: ಇಲ್ಲಿ ಏನಾಗುತ್ತದೆಂದರೆ, 1 ಗಂಟೆ 15 ನಿಮಿಷದವರೆಗೆ ಮಾನ್ಯ ರಾಜ್ಯಪಾಲರ ಕಾರ್ಯಕ್ರಮ ಇದೆ. ಎಲ್ಲಾ ಕಾರ್ಯಕ್ರಮ ಮುಗಿಯುವುದಕ್ಕೆ ಸುಮಾರು 1 ಗಂಟೆ 30 ನಿಮಿಷ ಆಗಬಹುದು. ಆದ್ದರಿಂದ ನಾಳೆ 2 ಗಂಟೆ 30 ನಿಮಿಷಕ್ಕೆ ಸೇರೋಣ.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 11.00 ಗಂಟೆಗೆ ರಾಜ್ಯಪಾಲರ ಭಾಷಣ ಇರುವುದಿಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ನಾಳೆ ಬೆಳಿಗ್ಗೆ ರಾಜ್ಯಪಾಲರ ಭಾಷಣ ಇದೆ. ಆದ್ದರಿಂದ ಬೆಳಿಗ್ಗೆಯವರೆಗೆ ಅಡ್ಜರ್ನ್ ಮಾಡಿ ರಾಜ್ಯಪಾಲರ ಭಾಷಣ ಮುಗಿದ ನಂತರ ಸಭೆಯನ್ನು ಮುಂದುವರಿಸಬಹುದು. ಅಂದರೆ, ಮತ್ತೆ ಪ್ರಾರಂಭ ಮಾಡಬೇಕಾಗಿರತಕ್ಕಂಥ ಟೈಮ್ ಫಿಕ್ಸ್ ಮಾಡಬಹುದು.

ಅಧ್ಯಕ್ಷರು: ನಾಳೆ ಬೆಳಿಗ್ಗೆ ರಾಜ್ಯಪಾಲರ ಭಾಷಣ ಇದೆ. ಅವರ ಭಾಷಣ ಮುಕ್ತಾಯವಾದ ಮೇಲೆ ಲಂಚ್ ಇರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಅದು ಆದ ನಂತರ ನಾವು ಟೈಂ ಫಿಕ್ಸ್ ಮಾಡಿ.

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಎಲ್ಲಾ ಶಾಸಕರುಗಳಿಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು: ಆಯಿತು. ಘನತೆವೆತ್ತ ರಾಜ್ಯಪಾಲರು ನಾಳೆ ಬೆಳಿಗ್ಗೆ 11.00 ಗಂಟೆಗೆ ಬಂದು ಭಾಷಣವನ್ನು ಮಾಡಲಿದ್ದಾರೆ. ಈ ಸದನದ ಕಾರ್ಯಕಲಾಪಗಳನ್ನು ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 6 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 28–09–2006ರಂದು ಬೆಳಿಗ್ಗೆ ರಾಜ್ಯಪಾಲರ ಭಾಷಣ ಮುಗಿದ ಮೇಲೆ ಮಧ್ಯಾಹ್ನ 2.30 ಗಂಟೆಗೆ ಸೇರಲು ನಿಶ್ಚಯಿಸಿತು.)